ಬೆಲೆ ರೂ.2.50 WPP No. SK/MNG/WPP/69
D.O.P - 15th of every month from Udupi Sorting Office

Smt. Nagaveni Ullas
Proprietor
Mobile : 9741626190
E-mail : rao.ullas@yahoo.co.in

RAMDEV ENTERPRISES
"Ramdev", Opp. Balaganapathi Temple, Padubidri-574111, Udupi Dist.

Authorised Distributor For :
1. KEYA-Amalgam Speciality Foods (I) Pvt. Ltd.
2. Swastiks-Vishnu Masala Food Pvt. Ltd.
3. Agarbathi, Loban & Camphor-Stockists

# ಶ್ರೀ ಶಾರದಾ

ಮಾಸಪತ್ರಿಕೆ – 15 ಆಗಸ್ಟ್ 2013

॥ ಧಿಯೋ ಯೋನಃ ಪ್ರಚೋದಯಾತ್ ॥

Regn.No.KAR/KAN/2000/2758 ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.) ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ – 576 102. ☎ 2520754

ಸಂಪುಟ-13 ಸಂಚಿಕೆ-8 ಪುಟಗಳು-8 Registered Under No.J/UDP/1260/2012-2014 Dated from 01-01-2012 to 31-12-2014.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಆಟಿತೊ ಆಟ ಕೂಟ"




ದೈನಂದಿನ ಯಾಂತ್ರಿಕ ಜೀವನದಿಂದ ಬೇಸತ್ತ ಮನಸ್ಸಿಗೆ ಮುದನೀಡುವ, ಸಮಾಜ ಬಾಂಧವರೆಲ್ಲರನ್ನೂ ಒಗ್ಗೂಡಿಸುವ ಪ್ರಸ್ತುತ ವರ್ಷದ ಆಟಗಳು–ಕೂಟಗಳು–ಹಬ್ಬಗಳು ಶ್ರೀ ಸಭಾದಲ್ಲಿ ನಡೆದವು. ಪರೀಕ್ಷೆಯ ಒತ್ತಡ, ಬೇಸಿಗೆಯ ಬೇಗೆ ಇವೆಲ್ಲವುಗಳ ನೆಪವೊಡ್ಡಿ ಸ್ವಲ್ಪಕಾಲ ವಿರಮಿಸಿದ ಸಭೆಯಲ್ಲಿ 'ಆಟಿತ ಆಟ ಕೂಟ'ವನ್ನು ತಾ.04–08–2013ರಂದು ಸಂಭ್ರಮ ಸಡಗರದಿಂದ ಆಚರಿಸಲಾಯಿತು.

ವಾಡಿಕೆಯಂತೆ ಒಳಾಂಗಣ ಕ್ರೀಡೆಗಳಾದ ಕೇರಂ ಮತ್ತು ವಿಶೇಷವಾಗಿ ಆಟಿಯಲ್ಲಿ ಆಡುವಂತಹ ಚೆನ್ನೆಮಣೆ–ಕಲ್ಲಾಟದ ಸ್ಪರ್ಧೆಯನ್ನು ಆಯೋಜಿಸಲಾಗಿತ್ತು.

ಮೊಟ್ಟಮೊದಲು ಹಿರಿಯರಾದ ಶ್ರೀಯುತ ರಘುರಾಮ ಶರ್ಮ ಮತ್ತು ಚೆಂಡುಕಳ ಶ್ರೀಪತಿರಾವ್‌ರವರು ಕೇರಂ ಆಟದ ಉದ್ಘಾಟನೆಗೆ ಚಾಲನೆ ನೀಡಿದರು. ಬೆಳ್ಮಣ್ ಜಯಚಂದ್ರ ಮತ್ತು ರಾಘವೇಂದ್ರ ರಾವ್ ಇವರ ನೇತೃತ್ವ ಹಾಗೂ ಮಾರ್ಗದರ್ಶನದಲ್ಲಿ ಹಿರಿಯರ ಹಾಗೂ ಕಿರಿಯರ ವಿಭಾಗವಿದ್ದ ಈ ಆಟ ಅತ್ಯಂತ ಸ್ಪರ್ಧಾತ್ಮಕವಾಗಿ ಮೂಡಿಬಂತು. ನುರಿತ ಮಹಿಳೆಯರು ಕಲ್ಲಾಟದಲ್ಲಿ ತೊಡಗಿದರೆ ಆಬಾಲ ವೃದ್ಧರು ಚೆನ್ನೆಮಣೆಯ ಆಟದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡರು.

(5ನೇ ಪುಟಕ್ಕೆ....)

### ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಕುಂಜಿಬೆಟ್ಟು ಉಡುಪಿ

ಸಂಘದ ಆಶ್ರಯದಲ್ಲಿ

**ಸೌರ ಋಗುಪಾಕರ್ಮ**ವು

ತಾ.20-08-2013ರಂದು ಮಂಗಳವಾರ ಶ್ರೀ ಶಾರದಾ ಮಂಟಪದಲ್ಲಿ ನಡೆಯಲಿದ್ದು ಬೆಳಿಗ್ಗೆ 10-00ರಿಂದ ಕಾರ್ಯಕ್ರಮವು ಪ್ರಾರಂಭವಾಗಲಿದೆ.

*ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಉಪಾಕರ್ಮದಲ್ಲಿ ಭಾಗವಹಿಸಬೇಕಾಗಿ ವಿನಂತಿಸಿಕೊಳ್ಳುತ್ತೇವೆ. ಭಾಗವಹಿಸುವವರು ಹೂ, ತುಳಸಿ, ಹರಿವಾಣ, ಕೌಳಿಗೆಸೌಟನ್ನು ತರಬೇಕಾಗಿ ವಿನಂತಿ.*

– ಕಾರ್ಯದರ್ಶಿ


## ಸನ್ಯಾಸಾಶ್ರಮ ಸ್ವೀಕರಿಸಿದ ಆತ್ಮಾರಾಮ ಶಾಸ್ತ್ರಿಗಳು



**ನಮ್ಮ ಸಮಾಜದ ಹಿರಿಯ ವಿದ್ವಾಂಸರಾದ ಕುರಯ ಆತ್ಮಾರಾಮ ಶಾಸ್ತ್ರಿಗಳು ದಿನಾಂಕ 14–07–2013ರಂದು ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶಾರದಾ ಪೀಠಾಧೀಶ್ವರ ಜಗದ್ಗುರು ಶ್ರೀ ಶ್ರೀ ಭಾರತೀ ತೀರ್ಥ ಮಹಾ ಸನ್ನಿದಾನಂಗಳವರ ಸನ್ನಿಧಿಯಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿ ಪರಮಹಂಸರಾದರು. ಅಲ್ಲದೆ ಶ್ರೀ ಶಾಸ್ತ್ರಿಗಳಿಗೆ ಶ್ರೀ ಶ್ರೀ ಮಾಧವಾಶ್ರಮ ಸ್ವಾಮಿಗಳೆಂಬ ಯೋಗಪಟ್ಟ (ನಾಮಕರಣ) ವನ್ನು ಜಗದ್ಗುರುಗಳು ಅನುಗ್ರಹಿಸಿದರು. ಈ ಸಂದರ್ಭದಲ್ಲಿ ಪೂಜ್ಯ ಜಗದ್ಗುರುಗಳು ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರನ್ನು ತುಮಕೂರಿನ ಹೆಬ್ಬೂರು ಗುರುಮಠಕ್ಕೆ ಪೀಠಾಧಿಪತಿಗಳಾಗಿ ಆಯ್ಕೆ ಮಾಡಿದರು.**

ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಕೃಚ್ಛ್ರಾಚರಣೆಯಿಂದ ಪ್ರಾರಂಭಿಸಿ ಯೋಗಪಟ್ಟದವರೆಗೆ ಮೂರು ದಿನಗಳಲ್ಲಿ ಅನೇಕ ಧಾರ್ಮಿಕ ವಿಧಿಗಳು ನೆರವೇರಿ ಕೊನೆಯ ದಿನ ಸರ್ವತ್ಯಾಗದೊಂದಿಗೆ ದೀಕ್ಷಾ ಸ್ವೀಕಾರ ನೆರವೇರಿತು. ಶ್ರೀ ಶ್ರೀ ಮಾಧವಾಶ್ರಮ ಸ್ವಾಮೀಜಿಯವರು ತಮ್ಮ ಪ್ರಥಮ ಚಾತುರ್ಮಾಸ್ಯವನ್ನು ಶ್ರೀ ಕ್ಷೇತ್ರ ಶೃಂಗೇರಿಯಲ್ಲಿಯೇ ಪೂರೈಸಿ ನಂತರ ಹೆಬ್ಬೂರು ಗುರು ಮಠದಲ್ಲಿ ನೆಲೆಸಲಿದ್ದಾರೆ.

ನಮ್ಮ ಸಮಾಜದ ಇತಿಹಾಸದಲ್ಲಿ ಶ್ರೀ ಕ್ಷೇತ್ರ ಶೃಂಗೇರಿಯಲ್ಲಿ ಜಗದ್ಗುರುಗಳ ಸನ್ನಿಧಿಯಲ್ಲಿ ಸನ್ಯಾಸ ಗ್ರಹಣವಾಗುತ್ತಿರುವುದು ಇದೇ ಪ್ರಥಮವಾಗಿದೆ. ಪ್ರಾಜ್ಞರೂ, ವೇದ ಪಾರಂಗತರೂ, ಮಹಾಜ್ಞಾನಿಗಳೂ ಆದ ಶ್ರೀ ಮಾಧವಾಶ್ರಮ ಸ್ವಾಮಿಗಳು ನಮ್ಮ ಶ್ರೀ ಶಾರದಾ ಪತ್ರಿಕೆಗೆ ಪ್ರಾರಂಭದಿಂದಲೂ ಹರಸಿ, ಅನೇಕ ಲೇಖನಗಳನ್ನು ಬರೆದು ಪತ್ರಿಕೆಯ ಘನತೆ ಹೆಚ್ಚಲು ಕಾರಣರಾಗಿದ್ದಾರೆ. ಪ್ರಸ್ತುತ ಶ್ರೀಗಳ ಲೇಖನದ "ಶ್ರೀ ಕೃಷ್ಣಾಯನ" ಪ್ರತಿ ತಿಂಗಳೂ ಧಾರಾವಹಿಯಾಗಿ ಪ್ರಕಟಗೊಳ್ಳುತ್ತಿರುವುದನ್ನು ಎಲ್ಲರೂ ಗಮನಿಸಬಹುದು. ಈ ಸಂದರ್ಭದಲ್ಲಿ ಶ್ರೀ ಶಾರದಾ ಬಳಗವು ಸ್ವಾಮೀಜಿಯವರಿಗೆ ಅನಂತ ಪ್ರಣಾಮಗಳೊಂದಿಗೆ ಅಭಿವಂದನೆಗಳನ್ನು ಸಲ್ಲಿಸುತ್ತದೆ.



ಶ್ರೀ ಬಾಬಾರಾಮ್‌ದೇವ್‌ಜೀ

ಸ್ವಸ್ಥ ಭಾರತ

**ಪತಂಜಲಿ ಆರೋಗ್ಯ ಕೇಂದ್ರ**

6-1-76ಡಿ(1), ಚಿಟ್ಪಾಡಿ, ಉಡುಪಿ-576101.
ಸ್ಥಿರವಾಣಿ : 0820-2523394 ಚರವಾಣಿ : 9343360236

ಸಮೃದ್ಧ ಭಾರತ



ಶ್ರೀ ಬಾಲಕೃಷ್ಣಜೀ

ಉತ್ತಮ ಸ್ವಾಸ್ಥ್ಯಕ್ಕಾಗಿ

ಬಾಬಾ ರಾಮದೇವ ಸ್ವಾಮೀಜಿಯವರ ನಿರ್ವಹಣೆಯಲ್ಲಿ ಹರಿದ್ವಾರದಲ್ಲಿ ಪತಂಜಲಿ ಆಯುರ್ವೇದ ಲಿಮಿಟೆಡ್ ಹಾಗೂ ದಿವ್ಯ ಫಾರ್ಮಸಿಯಲ್ಲಿ ಉತ್ಪಾದಿಸುತ್ತಿರುವ ಪ್ರಾಮಾಣಿಕ ಹಾಗೂ ಅತ್ಯುತ್ತಮವಾದ ಔಷಧಿಗಳು ಪ್ರಸಾಧನ ಸಾಮಾಗ್ರಿಗಳು ಪೌಷ್ಟಿಕ ಆಹಾರ ಉತ್ಪನ್ನಗಳು ನಮ್ಮಲ್ಲಿ ದೊರೆಯುತ್ತದೆ. ತಮ್ಮ ಸ್ವಾಸ್ಥ ರಕ್ಷಣೆಗಾಗಿ ಈ ಉತ್ಪನ್ನಗಳನ್ನು ಖರೀದಿಸಿ ಉಪಯೋಗಿಸಿರಿ. ಯಾವುದೇ ಉತ್ಪನ್ನಗಳಿಗೆ ಜಾಹೀರಾತಿನ ಹೊರೆ ಇರುವುದಿಲ್ಲ.

ಸಮಯ : ಬೆಳಿಗ್ಗೆ 9-00ರಿಂದ ಮಧ್ಯಾಹ್ನ 1-00, ಅಪರಾಹ್ನ 2-30ರಿಂದ ಸಂಜೆ 7-30ರ ವರೆಗೆ

ಉಚಿತ ಸಲಹೆ ಮತ್ತು ಸಮಾಲೋಚನೆಗಾಗಿ ಬೆಳಿಗ್ಗೆ 9-00ರಿಂದ ಮಧ್ಯಾಹ್ನ 1-00ರ ತನಕ ಅಪರಾಹ್ನ 3-00ರಿಂದ ರಾತ್ರಿ 7-00ರ ತನಕ ಆಯುರ್ವೇದ ವೈದ್ಯರು ಲಭ್ಯರಿರುತ್ತಾರೆ.

ದಿನಂಪ್ರತಿ ''ಉಚಿತ ಪ್ರಾಣಯೋಗ ತರಗತಿ''ಗಳು ನಡೆಯುತ್ತಿದೆ. ಸಮಯ : ಮುಂಜಾನೆ 5-30ರಿಂದ 7-00 ಗಂಟೆಯವರೆಗೆ

ವಿ.ಸೂ : ತಮ್ಮ ಪರಿಸರದಲ್ಲಿ "ಉಚಿತ ಪ್ರಾಣಯೋಗ" ಶಿಬಿರಗಳನ್ನು ಆಯೋಜಿಸುವರೆ ವಿಚಾರಿಸಿರಿ. ಮುಂಜಾನೆ 5.00 ರಿಂದ 7.30 ರವರೆಗೆ ಉಚಿತ ಚಾನಲ್ "ಆಸ್ಥಾ" ವನ್ನು ವೀಕ್ಷಿಸಿರಿ.

– ಮಾರ್ಪಳ್ಳಿ ಸದಾನಂದ ರಾವ್

**ಸಂಪಾದಕ ಮಂಡಳಿ**

ಕೃಷ್ಣಕುಮಾರ್ ರಾವ್, ಮಟ್ಟು
ಕೆ. ವೇಣುಗೋಪಾಲ್ ರಾವ್
ಡಾ। ವೈ. ಸುದರ್ಶನ ರಾವ್
ಟಿ. ಸುರೇಶ್ ರಾವ್, ನಿಟ್ಟೂರು
ಟಿ. ವಿಶ್ವನಾಥ ಶ್ಯಾನುಭಾಗ್
ಪ್ರಕಾಶ್ ರಾವ್ ಕೋಲ್ಪೆ, ಮಣಿಪಾಲ

ಈ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿ ಅಭಿವ್ಯಕ್ತವಾಗುವ ಅಭಿಪ್ರಾಯಗಳು, ಅನಿಸಿಕೆಗಳು ಲೇಖಕರ ಸ್ವಂತ ಅಭಿಪ್ರಾಯಗಳೇ ಹೊರತು ಅವು ಪತ್ರಿಕೆಯ ಸಂಪಾದಕರ ಅಥವಾ ಪ್ರಕಾಶಕರ ಅಭಿಪ್ರಾಯವಾಗಿರಬೇಕಾಗಿಲ್ಲ. ಲೇಖನಗಳನ್ನು ಮತ್ತು ಸುದ್ದಿಗಳನ್ನು ಪತ್ರಿಕೆಯ ಮೂಲ ಚಿಂತನೆಗೆ ಅನುಗುಣವಾಗಿ ಸೂಕ್ತ ಮಾರ್ಪಾಡು ಮಾಡಿಕೊಳ್ಳುವ ಅಧಿಕಾರ ಸಂಪಾದಕ ಮಂಡಳಿಗಿದೆ.

-ಸಂಪಾದಕ ಮಂಡಳಿ

## ಚಿಂತನ

ಇತ್ತೀಚೆಗೆ ಗ್ರಾಮಕರಣಿಕರಾಗಿ ಆಯ್ಕೆಯಾದ ಬೇರೆ ಜಿಲ್ಲೆಯ ಕೆಲವು ವ್ಯಕ್ತಿಗಳು ನಕಲಿ ಅಂಕ ಪಟ್ಟಿಯೊಂದಿಗೆ ಸಂದರ್ಶನ ಎದುರಿಸಿ ಹುದ್ದೆಗೆ ಆಯ್ಕೆ ಹೊಂದಿದ್ದು, ನಾಲ್ಕಾರು ತಿಂಗಳು ನಿರ್ಭೀತಿಯಿಂದ ತಮ್ಮ ಕರ್ತವ್ಯವನ್ನು ನಿರ್ವಹಿಸಿದ್ದಾರೆ. ಬುದ್ಧಿವಂತರ ಜಿಲ್ಲೆಯಲ್ಲಿ ಗ್ರಾಮಕರಣಿಕರಾಗಿ ಆಯ್ಕೆಗೊಂಡ ಈ ಅಭ್ಯರ್ಥಿಗಳ ಬಗ್ಗೆ ಶಹಬಾಸ್ ಎನ್ನದಿರಲು ಸಾಧ್ಯವೇ?

ಇದಲ್ಲದೆ ಶಾಲೆಗಳೇ ಇಲ್ಲದೆ - ಶಾಲಾ ವಿದ್ಯಾರ್ಥಿಗಳೂ ಇಲ್ಲದೆ ಶಿಕ್ಷಕರ ವೇತನ ಅನುದಾನವನ್ನೂ ವಿದ್ಯಾರ್ಥಿಗಳ ವಿದ್ಯಾರ್ಥಿ ವೇತನವನ್ನೂ ಕ್ರಮ ಪ್ರಕಾರ ಕಳೆದ 10-11 ವರ್ಷಗಳಿಂದ-ಲಕ್ಷ-ಕೋಟಿಗಟ್ಟಲೆ ಹಣವನ್ನು ಯಾವುದೋ ಕುಳಗಳು ಪಡೆದು ಗುಳುಂ ಮಾಡುತ್ತಿದ್ದ(ಗುಲ್ಬರ್ಗ ಜಿಲ್ಲೆಯಲ್ಲಿ) ವಿಚಾರವಂತೂ ಬಹಳಷ್ಟು ಸೋಜಿಗವನ್ನು ತರುವ ವಿಷಯ.

ಈ ಮೇಲಿನ ಎರಡು ಘಟನೆಗಳೂ ಪತ್ರಿಕೆಯಲ್ಲಿ ನಾವು-ನೀವು ಓದಿರುವ ವಿಚಾರಗಳು. ಇಲ್ಲಿ ಮಾಧ್ಯಮಗಳು ಸಂದರ್ಶನ ಎದುರಿಸಿ ಆಯ್ಕೆಯಾದ ಅಭ್ಯರ್ಥಿಗಳು ಹಾಗೂ ಲಕ್ಷಗಟ್ಟಲೆ ಅನುದಾನವನ್ನು ಕಬಳಿಸಿರುವ ವ್ಯಕ್ತಿಗಳನ್ನೇ ತಪ್ಪಿತಸ್ಥರೆಂದು ಚಿತ್ರಿಸಿ ವರದಿ ಮಾಡಿದಂತೆ ಕಾಣುತ್ತದೆ. ಅದಕ್ಕಿಂತಲೂ ಮುಖ್ಯ-ಅಭ್ಯರ್ಥಿಗಳ ಅಂಕಪಟ್ಟಿ ಮೊದಲಾದುವುಗಳನ್ನು "ಪರಿಶೀಲಿಸಿ" ತೇರ್ಗಡೆಗೊಳಿಸಿದ ಹಾಗೂ ನಿಯಮಿತವಾಗಿ ಪ್ರತಿ ತಿಂಗಳೂ, ವರ್ಷವೂ ಅನುದಾನ ಹಂಚುತ್ತಿದ್ದ ಅಧಿಕಾರಿಗಳನ್ನು ಏನೆನ್ನಬೇಕು? ಅಭ್ಯರ್ಥಿಗಳ ಆಯ್ಕೆ ಪ್ರಕ್ರಿಯೆ ಒಮ್ಮೆ -ಒಂದೆರಡು ದಿನಗಳಲ್ಲಿ ನಡೆದರೂ (ತಪ್ಪೇ)- ವರ್ಷಗಟ್ಟಲೆ ಪ್ರತಿ ತಿಂಗಳೂ ಹಲವು ಅಧಿಕಾರವುಳ್ಳ ವ್ಯಕ್ತಿಗಳ ಮುಖಾಂತರ ಸಂಬಳ ಅಥವಾ ವಿದ್ಯಾರ್ಥಿ ವೇತನವನ್ನು ಪಡೆದು ಗುಳುಂ ಮಾಡುವುದು ಸುಲಭದ ಕೆಲಸವೇ? ಈಗಿನ ಕಂಪ್ಯೂಟರ್ ಯುಗದಲ್ಲಿಯೂ ಇಂತಹ ಪ್ರಮಾದಗಳನ್ನು ಕಂಡು ಹಿಡಿಯಲು ಆಗದ ಅಧಿಕಾರಿಗಳು ಉದ್ಯೋಗದಲ್ಲಿದ್ದರೇನು ಪ್ರಯೋಜನ? ಇಂತಹ ತಪ್ಪು ಮಾಡಿದ ಅಧಿಕಾರಿಗಳಿಗೆ ಎಂತಹ ಶಿಕ್ಷೆ ಆಗುತ್ತದೆ? ಈ ಬಗ್ಗೆ ಪತ್ರಿಕೆಗಳೂ ವರದಿ ಮಾಡಿಲ್ಲ.

ಯಾವತ್ತೂ ಮೇಲಾಧಿಕಾರಿಗಳು ತಮ್ಮ ಕೈಕೆಳಗಿನ ನೌಕರರು-ಅಧಿಕಾರಿಗಳು ಸರಿಯಾದ ದಾರಿಯಲ್ಲಿದ್ದಾರೆಯೇ? ಅನುದಾನ ಸದ್ವಿನಿಯೋಗವಾಗುತ್ತದೆಯೇ? ಎಂದು ನೋಡುತ್ತಿರಬೇಕಾದುದು ಕರ್ತವ್ಯ. ಇಂತಹ ಕರ್ತವ್ಯ ಹೀನ ಅಧಿಕಾರಿಗಳಿಗೆ ಕಠಿಣ ಶಿಕ್ಷೆಯಾಗುವಂತಹ ಕಾಯ್ದೆಯನ್ನು ಸರಕಾರ ಜಾರಿಗೆ ತಂದರೆ ಇಂತಹ ಲೋಪದೋಷಗಳು ಕಡಿಮೆಯಾಗಬಹುದಲ್ಲವೇ?....

# ಶ್ರೀ ಕೃಷ್ಣಾಯನ

## (ಶ್ರೀ ಮದ್ಭಾಗವತಾನುಸಾರಿ)



- ಕೆ. ಆತ್ಮಾರಾಮ ಶಾಸ್ತ್ರೀ
ಬೆಂಗಳೂರು

(ಹಿಂದಿನ ಸಂಚಿಕೆಯಿಂದ...)

ಹೀಗೆ ಬ್ರಾಹ್ಮಣನನಿಂದೆಯಿಂದ ನೊಂದ ಅರ್ಜುನನು ತನ್ನ ಯೋಗ ಬಲದಿಂದ ಯಮಧರ್ಮನ ಪಟ್ಟಣವಾದ ಸಂಯಮಿನಿಗೆ ಹೋದನು. ಅಲ್ಲಿ ಬ್ರಾಹ್ಮಣನ ಮಗು ಕಾಣಿಸಲಿಲ್ಲ. ಅಲ್ಲಿಂದ ಇಂದ್ರನಗರಿ, ಅಲ್ಲಿಂದ ಆಗ್ನೇಯಾದಿ ದಿಕ್ಕುಗಳಿಗೆ ಗಾಂಡೀವವನ್ನು ಎತ್ತಿಕೊಂಡು ಹೋದನು.

ಎಲ್ಲೂ ವಿಪ್ರಪುತ್ರನ ಸುಳಿವು ಸಿಕ್ಕಲಿಲ್ಲ. ಹಿಂದಿರುಗಿ ಬಂದವನೇ ಪ್ರತಿಜ್ಞೆ ನೆರವೇರದ ಕಾರಣ ಅಗ್ನಿ ಪ್ರವೇಶಕ್ಕೆ ಸಜ್ಜಾದನು. ಆಗ ಶ್ರೀಕೃಷ್ಣನು ಅವನನ್ನು ತಡೆದನು. "ಅರ್ಜುನ, ಬ್ರಾಹ್ಮಣನ ಮಕ್ಕಳನ್ನು ನಾನು ನಿನಗೆ ತೋರಿಸಿಕೊಡುತ್ತೇನೆ. ಇದೇ ಜನರು ನಿನ್ನ ಶೌರ್ಯವನ್ನು ಹಾಡಿ ಹೊಗಳುತ್ತಾರೆ. "ಹೀಗೆ ಹೇಳಿದ ಭಗವಂತನು ಅರ್ಜುನನನ್ನೂ ತನ್ನ ದಿವ್ಯರಥದಲ್ಲಿ ಕುಳ್ಳಿರಿಸಿಕೊಂಡು ಪಶ್ಚಿಮ ದಿಕ್ಕಿಗೆ ಹೋದನು. ಸಪ್ತದ್ವೀಪಗಳನ್ನೂ, ಸಪ್ತಸಾಗರಗಳನ್ನು, ಸಪ್ತಪರ್ವತಗಳನ್ನೂ, ಲೋಕಾಲೋಕ ಪರ್ವತವನ್ನೂ ದಾಟಿ ಗಾಂಡಾಂಧಕಾರ ಹರಡಿರುವ ಸ್ಥಾನಕ್ಕೆ ಹೋದನು. ಅಲ್ಲಿ ಅವನ ಕುದುರೆಗಳಾದ ಶೈಬ್ಯ, ಸುಗ್ರೀವ, ಮೇಘ ಪುಷ್ಪ, ಬಲಾಹಕಗಳು ದಾರಿಗಾಣದೆ ಹೇಗೆಹೇಗೋ ಹೋಗಲಾರಂಭಿಸಿದವು. ಅದನ್ನು ನೋಡಿ ಯೋಗೇಶ್ವರರಿಗೂ ಯೋಗೇಶ್ವರನಾದ ಶ್ರೀಕೃಷ್ಣನು ಸಾವಿರ ಸೂರ್ಯರ ತೇಜಸ್ಸಿರುವ ತನ್ನ ಸುದರ್ಶನ ಚಕ್ರವನ್ನು ಕುದುರೆಗಳ ಮುಂದೆ ಸಾಗಲು ಆದೇಶಿಸಿದನು. ಹೀಗೆ ಹೋಗುತ್ತಾ ಅವರು ಅಂಧಕಾರದ ಕೊನೆಯ ಹಂತವನ್ನು ತಲುಪಿದರು. ಅಲ್ಲಿ ಅದ್ಭುತವೂ, ಪ್ರಖರವೂ, ಆದ ಪ್ರಕಾಶವಿತ್ತು. ಆ ಪರಂಜ್ಯೋತಿಯನ್ನು ನೋಡಲಾಗದೆ ಅರ್ಜುನನು ಕಣ್ಣು ಮುಚ್ಚಿಕೊಂಡನು ಅನಂತರ ಶೌರಿಯ ರಥವು ಅಲೋಕಸಾಮಾನ್ಯವಾದ ಜಲರಾಶಿಯನ್ನು ಹೊಕ್ಕಿತು. ಅಲೆಗಳು ಈ ಜಲರಾಶಿಗೆ ಅಲಂಕಾರದಂತಿದ್ದವು. ಅಲ್ಲೊಂದು ಭವ್ಯ, ದಿವ್ಯಭವನ ಎದುರಾಯಿತು. ಸಾವಿರಾರು ಮಣಿಸ್ತಂಭಗಳಿಂದ ಅದು ಶೋಭಿಸುತ್ತಿತ್ತು. ಅಲ್ಲಿ ಅತಿಭಯಂಕರ, ಅದ್ಭುತ ಶರೀರಿಯಾದ ಅನಂತನನ್ನು (ಮಹಾಶೇಷ ನನ್ನು) ಕಂಡರು. ಅವನಿಗೆ ಸಾವಿರ ಹೆಡೆಗಳೂ, ಪ್ರತಿಹೆಡೆಯೂ ಮಣಿಗಳಿಂದ ಭೂಷಿತವೂ, ಎರಡೂಸಾವಿರ ಕಣ್ಣುಗಳೂ, ಕೈಲಾಸದಂತೆ ಬೆಳ್ಳಗಿನ ದೇಹವೂ, ನೀಲ ನಾಲಿಗೆಗಳೂ ಇದ್ದವು. ಆ ಅನಂತನ ಮೇಲೆ ಪುರುಷೋತ್ತಮನಾದ ಶ್ರೀಮನ್ನಾರಾಯಣನು ಪವಡಿಸಿದ್ದನು. ಅವನು ಮೋಡದಂತೆ ಶ್ಯಾಮಲ ವರ್ಣನೂ, ಪೀತಾಂಬರ ಧಾರಿಯೂ, ಪ್ರಸನ್ನವದನನೂ, ಸುಂದರ



ನಯನನೂ, ವರ್ಣಖಚಿತ ಕೀರಿಟವುಳ್ಳವನೂ, ಕುಂಡಲಗಳಿಂದ ಅಲಂಕೃತನೂ, ಎದೆಯ ಮೇಲೆ ಶ್ರೀವತ್ಸಲಾಂಛನವಿರುವವನೂ, ವನಮಾಲೆಯಿಂದ ಶೋಭಿತನೂ ಆಗಿದ್ದನು. ಸುನಂದ, ನಂದ ಮೊದಲಾದ ಪಾರ್ಷದರು ಅಲ್ಲಿದ್ದರು. ಆಯುಧಗಳು ಮೂರ್ತಿವತ್ತಾಗಿ ನಿಂತಿದ್ದವು. ಪುಷ್ಟಿ, ಶ್ರೀ, ಕೀರ್ತಿ, ಜಯಾ ಎಂಬ ಶಕ್ತಿಗಳು, ಎಲ್ಲಾ ಋದ್ಧಿಗಳು ಅವನ ಸೇವೆ ಮಾಡುತ್ತಿದ್ದವು. ಶ್ರೀಕೃಷ್ಣನು ತನ್ನ ಮೂಲರೂಪವಾಗಿರುವ ಆ ಪರಮಾತ್ಮನಿಗೆ ನಮಸ್ಕರಿಸಿದನು. ಅರ್ಜುನನಿಗೆ ಅವನನ್ನು ಕಂಡು ಭಯವೇ ಆಯಿತು. ಭಯದಿಂದಲೇ ಅವನಿಗೆ ವಂದಿಸಿದನು. ತನ್ನ ಮುಂದೆ ಬದ್ಧಾಂಜಲಿಗಳಾಗಿ ನಿಂತಿದ್ದ ಕೃಷ್ಣಾರ್ಜುನರನ್ನು ಕುರಿತು ಶ್ರೀಮನ್ನಾರಾಯಣನೆಂದನು," ಕೃಷ್ಣಾರ್ಜುನರೇ, ನಿಮ್ಮನ್ನು ನೋಡುವ ಸಲುವಾಗಿಯೇ ನಾನು ಬ್ರಾಹ್ಮಣನ ಮಕ್ಕಳನ್ನು ಇಲ್ಲಿಗೆ ಬರುವಂತೆ ಮಾಡಿರುವೆನು. ನನ್ನ ಕಲೆಗಳಾದ ನೀವಿಬ್ಬರೂ, ಧರ್ಮಸ್ಥಾಪನೆಗಾಗಿಯೇ ಭೂಮಿಯಲ್ಲಿ ಅವತರಿಸಿರುವಿರಿ. ಆದಷ್ಟು ಬೇಗನೆ ಭೂಭಾರರಾದ ದೈತ್ಯರನ್ನು ಸಂಹಕರಿಸಿ ಇಲ್ಲಿಗೆ ಮರಳಿರಿ. ನೀವೇ ನರ ನಾರಾಯಣರೆಂಬ ಋಷಿಗಳು. ನಿಮಗೆ ಯಾವುದೇ ಆಕಾಂಕ್ಷೆಗಳಿಲ್ಲದಿದ್ದರೂ ಲೋಕಸಂಗ್ರಹಕ್ಕಾಗಿ ಧರ್ಮವನ್ನು ಆಚರಿಸುತ್ತಾ ಇರಿ. "ಹೀಗೆ ಪರಮ ಪುರುಷನಿಂದ ಆದಿಷ್ಟರಾದ ಕೃಷ್ಣಾರ್ಜುನರು ಬ್ರಾಹ್ಮಣ ಬಾಲಕರನ್ನು ಕರೆದುಕೊಂಡು ಭೂಲೋಕಕ್ಕೆ ಮರಳಿ ಬಂದರು. ಆ ಮಕ್ಕಳನ್ನು ಬ್ರಾಹ್ಮಣನಿಗೆ ಒಪ್ಪಿಸಿದರು. ಪರಮಾತ್ಮನ ಪರಮ ಧರ್ಮದ ದರ್ಶನವಾದ ಮೇಲೆ ಅರ್ಜುನನು ಶ್ರೀಕೃಷ್ಣನ ಮಹಿಮೆಯನ್ನರಿತನು. ಹಾಗೇ ಅವನ ಅನುಗ್ರಹದಿಂದಲೇ ತನ್ನ ಬಲ, ವೀರ್ಯಗಳೆಂಬುದನ್ನು ಮನವರಿಕೆ ಮಾಡಿಕೊಂಡನು.

### 3ನೇ ಅಧ್ಯಾಯ

ಶ್ರೀಕೃಷ್ಣನಿಗೆ ಅಷ್ಟ ಮಹಿಷಿಯರಲ್ಲಿ ಹತ್ತು ಹತ್ತು ಮಕ್ಕಳಾಗಿದ್ದಂತೆ ಇತರ ಹದಿನಾರು ಸಾವಿರದ ನೂರು ಪತ್ನಿಯರಲ್ಲೂ ಹತ್ತು ಹತ್ತು ಮಕ್ಕಳಾಗಿದ್ದರು. ಅವರೂ ಅವರ ಮಕ್ಕಳೂ ಉದ್ದಾಮವೀರರೇ ಆಗಿದ್ದರು. ಅವರಲ್ಲಿ ಹದಿನೆಂಟು ಮಂದಿ ಮಹಾರಥರಾಗಿದ್ದರು. (ಮಹಾರಥರೆಂದರೆ ಶಸ್ತ್ರಾಸ್ತ್ರ ಪ್ರಯೋಗದಲ್ಲಿ ನಿಪುಣರಾಗಿದ್ದು, ಹತ್ತುಸಾವಿರ ಯೋಧರೂಡನೆ ಯುದ್ಧ ಮಾಡುವವರು) ಅವರ ಹೆಸರುಗಳೂ ಇಂತಿವೆ- ಪ್ರದ್ಯುಮ್ನ,ಅನಿರುದ್ಧ,ದೀಪ್ತಿಮಂತ, ಭಾನು, ಸಾಂಬ, ಮಧು,ಬೃಹದ್ಭಾನು, ಚಿತ್ರಭಾನು, ವೃಕ, ಅರುಣ, ಪುಷ್ಕರ, ವೇದಬಾಹು, ಶ್ರುತದೇವ, ಸುನಂದನ, ಚಿತ್ರಬಾಹು, ವಿರೂಪ, ಕವಿ, ನ್ಯಗ್ರೋಧ ಇವರಲ್ಲಿ ಶ್ರೇಷ್ಠನೆಂದರೆ ರುಕ್ಮಿಣಿಯ ಮಗನಾದ ಪ್ರದ್ಯುಮ್ನ. ಪ್ರದ್ಯುಮ್ನನು ರುಕ್ಮಿಯ ಮಗಳಾದ ರುಕ್ಮವತಿಯನ್ನು ಮದುವೆಯಾಗಿದ್ದನಷ್ಟೆ?

ಈ ರುಕ್ಮವತಿಯಲ್ಲಿ ಹುಟ್ಟಿದವನೇ ಅನಿರುದ್ಧ. ಅನಿರುದ್ಧನಿಗೆ ಹತ್ತುಸಾವಿರ ಆನೆಗಳ ಬಲವಿತ್ತು. ಅವನೂ ರುಕ್ಮಿಣಿಯ ಮೊಮ್ಮಗಳಾದ ರೋಚನೆಯನ್ನು ವಿವಾಹವಾಗಿದ್ದನು. (ಮುಂದುವರಿಯುವುದು)

# ಶ್ರೀ ಶಾರದಾ ವೇದಿಕೆಯ ಮಹಾ ಪೋಷಕರಾಗಿ ಶ್ರೀ ಅದ್ಯಪಾಡಿ ವಸಂತಕುಮಾರ್



ಅದ್ಯಪಾಡಿ ವಸಂತಕುಮಾರ್ ಶ್ರೀ ಶಾರದಾ ವೇದಿಕೆಯ ಮಹಾಪೋಷಕರಾಗಿ ಸಹಕಾರ ನೀಡಿದ್ದಾರೆ. ಅದ್ಯಪಾಡಿಯ ದಿವಂಗತ ಪದ್ಮನಾಭ ರಾವ್ ಹಾಗೂ ಶ್ರೀಮತಿ ರತ್ನಮ್ಮ (ಪಾರ್ವತಿ) ದಂಪತಿಗಳ 6 ಮಂದಿ ಗಂಡು ಹಾಗೂ ಓರ್ವ ಹೆಣ್ಣು ಮಗಳಲ್ಲಿ ಪ್ರಥಮ ಪುತ್ರರಾದ ಶ್ರೀ ವಸಂತಕುಮಾರ್ ಪ್ರಾಥಮಿಕ ವಿದ್ಯಾಭ್ಯಾಸವನ್ನು ಅದ್ಯಪಾಡಿಯಲ್ಲಿ ಪೂರೈಸಿ ಪ್ರೌಢ ಶಿಕ್ಷಣವನ್ನು ಉಡುಪಿ ತಾಲೂಕಿನ ಕಟಪಾಡಿಯ ಎಸ್.ವಿ.ಎಸ್ ಪ್ರೌಢಶಾಲೆಯಲ್ಲಿ ಪಡೆದರು. ಪಿ.ಯು ಶಿಕ್ಷಣವನ್ನು ಮತ್ತೆ ಬಜಪೆಯಲ್ಲಿ ಮುಂದುವರಿಸಿದರು.

ನಂತರ ಮಂಗಳೂರಿನ ಮಜ್‌ಗಾನ್ ಡಾಕ್‌ನಲ್ಲಿ ಹಲವು ವರ್ಷ ಉದ್ಯೋಗಿಯಾಗಿದ್ದರು. ಭಾರತದಾದ್ಯಂತ ಬಹುಬೇಡಿಕೆಯ ಬೆರಳೆಣಿಕೆಯ ಕುಶಲ ಕರ್ಮಿಗಳಲ್ಲಿ ಒಬ್ಬರಾಗಿ ಬೇರೆ ಬೇರೆ ಕಂಪನಿಗಳಲ್ಲಿ ವಿಶಾಖ ಪಟ್ಟಣ, ಕಲ್ಕತ್ತ, ಮಧ್ಯಪ್ರದೇಶ, ಹಿಮಾಚಲಪ್ರದೇಶ ಮಾತ್ರವಲ್ಲದೆ ಮಸ್ಕತ್, ಇರಾಕ್, ಯಮನ್, ಮಾರಿಷಸ್, ದುಬೈ ಮೊದಲಾದ ದೇಶಗಳಲ್ಲಿಯೂ ತಮ್ಮ ಅನುಭವದ ಲಾಭವನ್ನು ಹಂಚಿದ್ದಾರೆ. ಸದ್ಯ ಅಫ್ಕೋನ್ಸ್ ಲಿಮಿಟೆಡ್‌ನಲ್ಲಿ ಫೀಲ್ಡ್ ಸೂಪರ್ ವೈಝರ್-ಫೋರ್ಮನ್ ಆಗಿ ಜವಾಬ್ದಾರಿ ಹೊಂದಿದ್ದಾರೆ.

ಸುರತ್ಕಲ್‌ನ ದಿವಂಗತ ಶಿರ್ತಾಡಿ ಆನಂದ್ ರಾವ್ ಹಾಗೂ ಶ್ರೀಮತಿ ಕಮಲಮ್ಮ ದಂಪತಿಗಳ ಪುತ್ರಿ ಶ್ರೀಮತಿ ವೇದಾವತಿಯವರನ್ನು ವಿವಾಹವಾಗಿರುವ ವಸಂತ್ ಕುಮಾರ್ ರವರಿಗೆ ಇಬ್ಬರು ಮಕ್ಕಳು (ಅರುಣ್ ಕುಮಾರ್,ಬಿ.ಕಾಂ ಪದವೀದರ ವಿವಾಹಿತರಾಗಿದ್ದು, ಅನಿಲ್ ಕುಮಾರ್, ಡಿಪ್ಲೊಮಾ ಇನ್ ಇಲೆಕ್ಟ್ರಿಕಲ್, ಇಬ್ಬರೂ ಎಲ್ ಆಂಡ್ ಟಿ ಯಲ್ಲಿ ಉದ್ಯೋಗಿಗಳು) ಇದ್ದಾರೆ.

ಕಾಯಕವೇ ಕೈಲಾಸವೆಂಬಂತೆ ಉದ್ಯೋಗಕ್ಕೆ ಪ್ರಾಧಾನ್ಯತೆ ನೀಡಿರುವ ಶ್ರೀ ವಸಂತ್ ಕುಮಾರ್‌ರು ಶ್ರೀ ಶಾರದಾ ವೇದಿಕೆಗೆ ನೀಡಿರುವ ಈ ಕೊಡುಗೆಯನ್ನು ಕೃತಜ್ಞತೆಗಳೊಂದಿಗೆ ಸ್ವೀಕರಿಸಿ, ಅವರಿಗೆ ಹಾಗೂ ಅವರ ಮನೆಯವರಿಗೆ ಅನಂತ ಶ್ರೇಯಸ್ಸು ಉಂಟಾಗಲಿ ಎಂದು ಶ್ರೀ ಶಾರದಾ ಬಳಗವು ಶ್ರೀ ಶಾರದಾ ಮಾತೆಯಲ್ಲಿ ಪ್ರಾರ್ಥಿಸುತ್ತದೆ.

**ಶ್ರೀಶಾರದಾ ವೇದಿಕೆಯ ಮಹಾ ಪೋಷಕರು :** ದಿ। ಅಂಬಲಪಾಡಿ ಕೃಷ್ಣ ರಾವ್, ಡಾ। ಪಿ. ವಿಠ್ಠಲ ರಾವ್ ಮಣಿಪಾಲ, ಕೆ. ರಮೇಶ ಶ್ಯಾನುಭಾಗ್ ಸತಾರ, ಟಿ. ಆರ್. ಶ್ಯಾನುಭಾಗ್ ಬೆಂಗಳೂರು, ನಳಿನಿ ಆರ್. ಶ್ಯಾನುಭಾಗ್ ಬೆಂಗಳೂರು, ದಿ। ಕುಂಜಾರು ವಿಠ್ಠಲ ರಾವ್ ಮುಂಬೈ, ಶ್ಯಾಮರಾವ್ ಅಲೆವೂರು, ವೈ. ಮುರಳೀಕೃಷ್ಣ ರಾವ್ ಉಡುಪಿ, ಸಿ. ಸರ್ವೋತ್ತಮ ರಾವ್ ಚಿಟ್ಪಾಡಿ, ಎಂ. ಸದಾನಂದ ರಾವ್ ಚಿಟ್ಪಾಡಿ, ದಿ। ಡಾ। ವೈ. ಚಂದ್ರಶೇಖರ ರಾವ್ ಕುಕ್ಕಿಕಟ್ಟೆ, ಬಿ. ಎಂ.ಸಂಜೀವ ರಾವ್ ಮಂಗಳೂರು, ಎನ್.ಡಿ. ಜಗನ್ನಾಥ ರಾವ್ ಬೆಂಗಳೂರು, ಕೆ. ಬಿ. ರವಿಶಂಕರ್‌ರಾವ್ ಮಂಗಳೂರು, ಪಿ. ಆರ್. ಸದಾಶಿವ ರಾವ್ ಬೆಂಗಳೂರು, ಬೆಳ್ಮಣ್ ವಾಸುದೇವ ರಾವ್ ಉಡುಪಿ, ಕುಡುಪು ನಾರಾಯಣ ರಾವ್ ಸತಾರ, ಎ. ಕೃಷ್ಣಮೂರ್ತಿ ರಾವ್ ಆಳುಗ್ಗೇಲು, ಶ್ರೀಮತಿ ಸರೋಜಿನಿ ದೇವರಾವ್ ನಂದಿಕೂರು, ಡಾ। ಪರೀಕ ಗೋಪಾಲಕೃಷ್ಣರಾವ್ ಮಾರ್ಪಳ್ಳಿ ಉಡುಪಿ, ಕೆ. ಭಾಸ್ಕರರಾವ್ ಉಡುಪಿ, ಕೆ. ವೇಣುಗೋಪಾಲರಾವ್ ಅಂಬಲ್ಪಾಡಿ, ಬಿ. ಕೃಷ್ಣಮೂರ್ತಿರಾವ್ ಅಂಬಲ್ಪಾಡಿ, ಶ್ರೀಮತಿ ವಿಜಯಾ ಆರ್.ರಾವ್ ಮುಂಬಯಿ, ಪ್ರೊ। ತಂತ್ರಾಡಿ ನಾರಾಯಣ ಶ್ಯಾನುಭಾಗ್, ಶ್ರೀಮತಿ ಮಾಲತಿ ಶಿವರಾವ್ ಮಣಿಪಾಲ, ವೈ. ಶಂಕರನಾರಾಯಣರಾವ್ ಪಡುಬಿದ್ರಿ, ವೈ. ಮೋಹನ ರಾವ್ ಅಂಬಲಪಾಡಿ, ಬೆಳ್ಳೆ ಶ್ರೀನಿವಾಸ ರಾವ್ ಮುಂಬೈ, ಡಾ। ವೈ. ಸುದರ್ಶನ ರಾವ್ ಕುಕ್ಕಿಕಟ್ಟೆ, ಕಟ್ಟೆ ವೆಂಕಟ್ರಾವ್ ಪಲಿಮಾರು, ಮಟ್ಟು ದಿವಾಕರ ರಾವ್ ಮುಂಬಯಿ, ಕೆ.ಉಮೇಶ್ ರಾವ್ ಕುಡಾಲ್, ಕೆ.ವೆಂಕಟರಮಣರಾವ್ ಕುಡಾಲ್, ಕಡಂದಲೆ ಶ್ರೀಪತಿ ರಾವ್ ಅಧಿಕಾರಿ ಮುಂಬೈ, ಅಂಬಲ್ಪಾಡಿ ರಾಘವೇಂದ್ರ ರಾವ್ ಬೆಂಗಳೂರು, ಅದ್ಯಪಾಡಿ ವಸಂತ ಕುಮಾರ್

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

## ಡಾ| ದಯಾನಂದ ಎಸ್. ರಾವ್ ಟ್ರಸ್ಟ್-ಸಾಲ ವಿದ್ಯಾರ್ಥಿ ವೇತನಕ್ಕೆ ಅರ್ಜಿ ಆಹ್ವಾನ

ಡಾ| ದಯಾನಂದ ಎಸ್. ರಾವ್ ಎಜ್ಯುಕೇಶನ್ ಟ್ರಸ್ಟ್, ಬೆಂಗಳೂರು, ಇವರು "ರತ್ನಾಬಾಯಿ ಸ್ಮಾರಕ ಸಾಲ ವಿದ್ಯಾರ್ಥಿವೇತನ"ಕ್ಕಾಗಿ ಉಡುಪಿ ಕುಂಜಿಬೆಟ್ಟಿನ ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.)ಕ್ಕೆ ಸಾಲ ವಿದ್ಯಾರ್ಥಿವೇತನ ನೀಡಲು ನಗದು ಹಣವನ್ನು ಒದಗಿಸಿದ್ದಾರೆ. ಈ ಮೊಬಲಗನ್ನು ಟ್ರಸ್ಟ್‌ನ ನಿಬಂಧನೆಯಂತೆ ಕಲಿಕೆ ಸಮಯದಲ್ಲಿ ಬಡ್ಡಿ ರಹಿತ ಸಾಲ ರೂಪದಲ್ಲಿ ವಿದ್ಯಾರ್ಥಿಗಳಿಗೆ ನೀಡಲಾಗುವುದು. 2013-2014ನೇ ಶೈಕ್ಷಣಿಕ ಸಾಲಿನಲ್ಲಿ ವೃತ್ತಿಪರ ತರಗತಿಗಳಿಗೆ ಸೇರಿದ ಉಡುಪಿ, ದಕ್ಷಿಣ ಕನ್ನಡ ಜಿಲ್ಲೆಯ ಇಂಜಿನಿಯರಿಂಗ್, ಮೆಡಿಕಲ್, ಇತ್ಯಾದಿ ತರಗತಿಗಳ ವಿದ್ಯಾರ್ಥಿಗಳಿಗೆ ಈ ಸಾಲ ವಿದ್ಯಾರ್ಥಿವೇತನವನ್ನು ನೀಡಲಾಗುವುದು. **ಅವರ ಅಗತ್ಯತೆ, ಆರ್ಥಿಕ ಸ್ಥಿತಿಗತಿ ಮತ್ತು ಪ್ರತಿಭೆಯನ್ನಾಧರಿಸಿ ಸಾಲ ಮಂಜೂರು ಮಾಡಲಾಗುವುದು.** ಸಾಲ ವಿದ್ಯಾರ್ಥಿ ವೇತನವನ್ನು ವಿದ್ಯಾರ್ಥಿಯ ಮುಂದಿನ ವರ್ಷಗಳ ಪ್ರಗತಿಯನ್ನು ಪರಿಶೀಲಿಸಿ ಪೂರ್ಣ ಅಧ್ಯಯನ ಅವಧಿಯಲ್ಲಿ ಮುಂದುವರಿಸಲಾಗುವುದು.

ಸಾಲ ವಿದ್ಯಾರ್ಥಿವೇತನವನ್ನು ಪಡೆಯಲು ಆಸಕ್ತಿಯುಳ್ಳ ವಿದ್ಯಾರ್ಥಿಗಳು ತಮ್ಮ ಹೆಸರು, ರಕ್ಷಕರ ಹೆಸರು, ಪರೀಕ್ಷೆಯ ಅಂಕಪಟ್ಟಿ ಹಾಗೂ ವಿದ್ಯಾಭ್ಯಾಸ ಮಾಡುವ/ಮುಂದುವರಿಸುವ ಬಗ್ಗೆ ದಾಖಲೆಯೊಂದಿಗೆ (ವ್ಯಾಸಂಗ ಪ್ರಮಾಣ ಪತ್ರ) ಈ ಕೆಳಗಿನ ವಿಳಾಸಕ್ಕೆ ತಾ.30-09-2013ರ ಒಳಗೆ ತಲಪುವಂತೆ ಕಳುಹಿಸಬೇಕು.

**ವಿ.ಸೂ. : ಕಳೆದ ಸಾಲಿನಲ್ಲಿ ಸಾಲ ವಿದ್ಯಾರ್ಥಿ ವೇತನ ಪಡೆದುಕೊಂಡ ಅಭ್ಯರ್ಥಿಗಳು ನವೀಕರಣಕ್ಕಾಗಿ ಕಳೆದ ಸಾಲಿನ ತಮ್ಮ ವ್ಯಾಸಂಗದ ಪ್ರಗತಿಯ ವಿವರ ಹಾಗೂ ಪ್ರಸಕ್ತ ಸಾಲಿನ ವ್ಯಾಸಂಗ ಪ್ರಮಾಣ ಪತ್ರದ ಜೊತೆಗೆ ಅರ್ಜಿ ಸಲ್ಲಿಸಬೇಕು. ವ್ಯಾಸಂಗ ಪೂರೈಸಿದ ವಿದ್ಯಾರ್ಥಿಗಳು ಮರುಪಾವತಿಸುವ ಬಗ್ಗೆ ಶ್ರೀ ಶಾರದಾ ಮಂಟಪ ಅಥವಾ ಶ್ರೀ ಶಾರದಾ ಕ್ರೆಡಿಟ್ ಕೋ-ಅಪರೇಟಿವ್ ಸೊಸೈಟಿಯಲ್ಲಿ ವಿಚಾರಿಸಬಹುದು.**

**ಸಂಚಾಲಕರು,** ವಿದ್ಯಾರ್ಥಿ ವೇತನ ವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.),
ಶ್ರೀ ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ - 576 102. ಫೋನ್ : 0820-2520754

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

ವಿದ್ಯಾರ್ಥಿ ವೇತನ ವೇದಿಕೆ

### ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನ

**ಪದವಿಪೂರ್ವ, ಪದವಿ, ಸ್ನಾತಕೋತ್ತರ, ಡಿ.ಎಡ್., ಬಿ.ಎಡ್., ಡಿಪ್ಲೋಮಾ, ಇಂಜಿನಿಯರಿಂಗ್, ವೈದ್ಯಕೀಯ, ವೇದ ತರಗತಿಗಳಲ್ಲಿ ಕಲಿಯುತ್ತಿರುವ, ಹೆತ್ತವರ ವಾರ್ಷಿಕ ಆದಾಯವು ರೂ.2,00,000ಕ್ಕೆ ಮೀರದ (ಅರ್ಜಿ ಸಲ್ಲಿಸುವಾಗ ಈ ವಿಚಾರವನ್ನು ಅಭ್ಯರ್ಥಿಗಳು ದಯವಿಟ್ಟು ಗಮನಿಸಬೇಕು) ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿಯನ್ನು ಆಹ್ವಾನಿಸಲಾಗಿದೆ. ಅರ್ಜಿಯ ಜೊತೆಯಲ್ಲಿ ಹಿಂದಿನ ತರಗತಿಯ ಅಂಕಪತ್ರ ಹಾಗೂ ಪ್ರಸಕ್ತ ಕಲಿಯುತ್ತಿರುವ ಶಾಲೆಯ ಮುಖ್ಯಸ್ಥರ ಪ್ರಮಾಣಪತ್ರವನ್ನು ಒದಗಿಸಬೇಕು. ಅರ್ಜಿ ಫಾರಂಗಳು ಶ್ರೀಶಾರದಾ ಮಂಟಪದ ಕಛೇರಿಯಲ್ಲಿ ಲಭ್ಯವಿದೆ. ಅರ್ಜಿ ಫಾರಂಗಳನ್ನು ತುಂಬಿಸಿ ಸಂಬಂಧಪಟ್ಟ ದಾಖಲೆಗಳೊಂದಿಗೆ ತಾ.30-9-2013ರ ಒಳಗೆ ಸಂಘದ ಕಛೇರಿಗೆ ಕಳುಹಿಸುವುದು.**

**- ಅಧ್ಯಕ್ಷರು, ವಿದ್ಯಾರ್ಥಿವೇತನ ವೇದಿಕೆ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು, ಉಡುಪಿ - 576 101.**

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಉದಯಚಂದ್ರ ಪ್ರತಿಭಾ ಪುರಸ್ಕಾರ 2012-13

ಸಂಘದ ಯುವವೇದಿಕೆಯ ಆಶ್ರಯದಲ್ಲಿ ನಮ್ಮ ಸಮಾಜದ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಉದಯಚಂದ್ರ ಸ್ಮಾರಕ ಪುರಸ್ಕಾರ ನೀಡಿ ಪುರಸ್ಕರಿಸಲು ನಿಶ್ಚಯಿಸಲಾಗಿದೆ. 2012-13ನೇ ಸಾಲಿನ ಎಸ್.ಎಸ್.ಎಲ್.ಸಿ., ಪದವಿಪೂರ್ವ (ಮೂರು ವಿಭಾಗ) ತರಗತಿಗಳ ಅಂತಿಮ ಪರೀಕ್ಷೆಗಳಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿ ಮತ್ತು ಪದವಿ, ಸ್ನಾತಕೋತ್ತರ, ವೈದ್ಯಕೀಯ, ಕಾನೂನು, ಇಂಜಿನಿಯರಿಂಗ್‌ಗಳಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಲಾಗುವುದು. ಆದ್ದರಿಂದ ಶೇಕಡಾ 80ಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳು 30-09-2013ರ ಒಳಗೆ ಅಂಕಪಟ್ಟಿಯ ಪ್ರತಿ ಮತ್ತು ಇತರ ಮಾಹಿತಿಯೊಂದಿಗೆ ಅರ್ಜಿಯನ್ನು ಕಳುಹಿಸಿ ಕೊಡಬೇಕು. ಎಸ್.ಎಸ್.ಎಲ್.ಸಿ. ಮತ್ತು ಪಿ.ಯು.ಸಿ.ಯಲ್ಲಿಯೂ 80%*ಕ್ಕಿಂತ ಹೆಚ್ಚು ಅಂಕಗಳಿಸಿದವರು ಮಾತ್ರ ಅರ್ಜಿ ಕಳುಹಿಸುವುದು. ಪದವಿ ಮತ್ತು ಇತರ ವಿಭಾಗಗಳಲ್ಲಿ ರ್‍ಯಾಂಕ್‌ಗಳಿಸಿದ ಬಗ್ಗೆ ಅಧಿಕೃತ ದಾಖಲೆಗಳನ್ನು ಕಳುಹಿಸಬೇಕು.

ಅರ್ಜಿಯನ್ನು "ಸಂಚಾಲಕರು, ಯುವವೇದಿಕೆ, ಶ್ರೀ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ, ಶ್ರೀ ಶಾರದಾ ಮಂಟಪ, ಶಾರದಾನಗರ, ಕುಂಜಿಬೆಟ್ಟು ಉಡುಪಿ - 576 102" ಇಲ್ಲಿಗೆ ಕಳುಹಿಸಬೇಕು. **ಅರ್ಜಿಯಲ್ಲಿ ಅವಶ್ಯವಾಗಿ ತಮ್ಮ ದೂರವಾಣಿ ಸಂಖ್ಯೆಯನ್ನು ನಮೂದಿಸಬೇಕು.** ವಿಜಯದಶಮಿಯಂದು ಸಂಜೆ ಪ್ರತಿಭಾ ಪುರಸ್ಕಾರ ವಿತರಿಸಲಾಗುವುದು.

**- ಸಂಚಾಲಕರು, ಯುವವೇದಿಕೆ.**

*(ಎಸ್‌ಎಸ್‌ಎಲ್‌ಸಿ. ಹಾಗೂ ಪಿಯುಸಿ ವಿಭಾಗದಲ್ಲಿ ಅತಿ ಹೆಚ್ಚು ಅಂಕ ಪಡೆದ ಒಬ್ಬೊಬ್ಬರಿಗೆ ಮಾತ್ರ ಪುರಸ್ಕಾರ ನೀಡಲಾಗುವುದು. ಪದವಿ ಹಾಗೂ ಇತರ ವಿಭಾಗಗಳಲ್ಲಿ ರ್‍ಯಾಂಕ್ ವಿಜೇತರಿಗೆ ಮಾತ್ರ ಪುರಸ್ಕಾರವಿದೆ.)

## ಶ್ರೀಶಾರದಾ ದೇವಸ್ಥಾನ, ಶಾರದಾನಗರ, ಕುಂಜಿಬೆಟ್ಟು, ಉಡುಪಿ

### ಈ ತಿಂಗಳ ಕಾರ್ಯಕ್ರಮಗಳು

**(ದರ್ಶನದ ಸಮಯ ಬೆಳಿಗ್ಗೆ 8-00ರಿಂದ 12-00, ಸಂಜೆ 3-30ರಿಂದ 8-00)**

| | |
|---|---|
| ಮಂಗಳಾರತಿ : | ಪ್ರತಿ ದಿನ ಬೆಳಿಗ್ಗೆ 8-00, ಮಧ್ಯಾಹ್ನ 12-00 ಹಾಗೂ ರಾತ್ರಿ 7-30 ಗಂಟೆಗೆ |
| ಪ್ರತಿ ಸೋಮವಾರ: | **"ಸತ್ಸಂಗದವರಿಂದ ಭಜನೆ"** ಸಂಜೆ 6-00 ಗಂಟೆಯಿಂದ |
| ಪ್ರತಿ ಮಂಗಳವಾರ: | **"ಸೌಂದರ್ಯಲಹರಿ ಪಾರಾಯಣ"** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಶುಕ್ರವಾರ : | **ಲಲಿತಾ ಸಹಸ್ರನಾಮ ಮತ್ತು ದೇವರ ಭಜನೆ** ಸಂಜೆ 5-00 ಗಂಟೆಯಿಂದ (ಮಹಿಳಾ ವಿಭಾಗದಿಂದ) |
| ಪ್ರತಿ ಆದಿತ್ಯವಾರ : | ಸ್ವಾಧ್ಯಾಯ ಸಮಿತಿಯವರಿಂದ **"ಪಾರಾಯಣ"** ಸಂಜೆ ಗಂಟೆ 4-30ರಿಂದ |

**ಸಂಕಷ್ಟಹರ ಚತುರ್ಥಿಯಂದು (ತಾ.24-08-2013) "ಸಾಮೂಹಿಕ ಗಣಹೋಮ" ಬೆಳಿಗ್ಗೆ ಗಂಟೆ 10-00ರಿಂದ (ಸೇವಾ ಶುಲ್ಕ ರೂ.51/-)**

**ತಾ.25-08-2013 ಪಂಚಮಿಯಂದು "ನಾಗದೇವರಿಗೆ ತನುಸೇವೆ" ಬೆಳಿಗ್ಗೆ 9-00ರಿಂದ ಮಧ್ಯಾಹ್ನ 12-00 ಗಂಟೆಯ ತನಕ**

**ತಾ.17-08-2013 ಮೂಲಾ ನಕ್ಷತ್ರದ ದಿನದಂದು ಶ್ರೀದೇವಿಗೆ ಸಹಸ್ರನಾಮಾರ್ಚನೆ (ಸಮಯ ಸಂಜೆ 5-00ರಿಂದ 6-00ರ ವರೆಗೆ)**

### ಭಕ್ತಾದಿಗಳೆಲ್ಲರಿಗೂ ಆದರದ ಸ್ವಾಗತ

## ಶ್ರೀಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘ (ರಿ.), ಶಾರದಾನಗರ, ಕುಂಜಿಬೆಟ್ಟು, ಉಡುಪಿ.

### ಅಂಬಲ್ಪಾಡಿ ಕೃಷ್ಣರಾವ್ ಸ್ಮಾರಕ ವಿದ್ಯಾರ್ಥಿ ಪುರಸ್ಕಾರ

ಉಡುಪಿ/ದ.ಕ. ಜಿಲ್ಲೆಯ ವ್ಯಾಪ್ತಿಯಲ್ಲಿ ವಾಸ್ತವ್ಯದಲ್ಲಿರುವ ಯಾವುದೇ ವಿಶ್ವವಿದ್ಯಾಲಯದಲ್ಲಿ ಕಲಿಯುವ ಸ್ನಾತಕೋತ್ತರ ಪದವಿಯಲ್ಲಿ (ಯಾವುದೇ ವಿಷಯದಲ್ಲಿ) ರ್‍ಯಾಂಕ್ ವಿಜೇತರಾದ ನಮ್ಮ ಸಮಾಜದ ಅರ್ಹ ವಿದ್ಯಾರ್ಥಿಗಳಿಗೆ ಪುರಸ್ಕಾರ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ತಮ್ಮ ಅರ್ಜಿಯನ್ನು ಬಿಳಿ ಹಾಳೆಯಲ್ಲಿ ಬರೆದು, ಅದರೊಟ್ಟಿಗೆ ರ್‍ಯಾಂಕ್ ಸಿಕ್ಕಿದ ಬಗ್ಗೆ ಸೂಕ್ತ ವಿವರದೊಂದಿಗೆ ತಾ.30-09-2013ರ ಒಳಗೆ ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ ಶ್ರೀ ಶಾರದಾ ಮಂಟಪ, ಶ್ರೀ ಶಾರದಾ ನಗರ, ಕುಂಜಿಬೆಟ್ಟು, ಉಡುಪಿ ಇಲ್ಲಿಗೆ ಕಳುಹಿಸಬೇಕಾಗಿ ವಿನಂತಿ.

**-ಕಾರ್ಯದರ್ಶಿ**

## ಶ್ರೀ ಸ್ಥಾನಿಕ ಬ್ರಾಹ್ಮಣ ಮಹಾಮಂಡಲ, ಕರಂಗಲ್ಪಾಡಿ, ಮಂಗಳೂರು

### (ಸ್ಥಾನಿಕ ಬ್ರಾಹ್ಮಣರ ಸಂಘಗಳ ಹಾಗೂ ಸಂಪನ್ಮೂಲ ವ್ಯಕ್ತಿಗಳ ಜಾಗತಿಕ ಮಟ್ಟದ ಒಕ್ಕೂಟ)

ತಾ.7-7-2013ರಂದು ಮಂಗಳೂರಿನಲ್ಲಿ ಜರಗಿದ ಆಡಳಿತ ಮಂಡಳಿಯ ಸಭೆಯಲ್ಲಿ ನಮ್ಮ ಸಮಾಜವನ್ನು ಪ್ರತಿನಿಧಿಸುತ್ತಿರುವ ವೈದಿಕ ವೃತ್ತಿಯಲ್ಲಿರುವ ಸಮಾಜಬಾಂಧವರ ಶ್ರೇಯೋಭಿವೃದ್ಧಿಗಾಗಿ ಕೆಲವೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವರೇ ಅದಕ್ಕೆ ಪೂರ್ವಭಾವಿಯಾಗಿ ನಮ್ಮ ಸಮಾಜದ ವೈದಿಕರೆಲ್ಲರ ಬಗ್ಗೆ ಮಾಹಿತಿಯನ್ನು ಸಂಗ್ರಹಿಸುವುದಾಗಿ ನಿಶ್ಚಯಿಸಲಾಗಿದೆ. ಈ ಮಾಹಿತಿ ಸಂಗ್ರಹಣೆಯ ಜವಾಬ್ದಾರಿಯನ್ನು ಆಯಾ ಪ್ರದೇಶದ ಸದಸ್ಯ ಸಂಘಗಳಿಗೆ ಹಂಚಿಕೊಡಲಾಗಿದ್ದು ಸಂಘದ ಕಾರ್ಯಕರ್ತರು ಮಾಹಿತಿಗಾಗಿ ತಮ್ಮನ್ನು ಸಂಪರ್ಕಿಸಿದಾಗ ಅವರು ಕೇಳಿದ ಮಾಹಿತಿಯನ್ನಿತ್ತು ಸಹಕರಿಸಬೇಕೆಂದು ವೈದಿಕರೆಲ್ಲರನ್ನು ಕೋರುತ್ತಿದ್ದೇವೆ. ಹಾಗೆಯೇ ಒಂದು ವೇಳೆ ಆಗಸ್ಟ್ ಹದಿನೈದರೊಳಗೆ ಯಾರಾದರೂ ವೈದಿಕರನ್ನು ನಮ್ಮ ಕಾರ್ಯಕರ್ತರು ಸಂಪರ್ಕಿಸದೇ ಬಿಟ್ಟುಹೋಗಿದ್ದ ಪಕ್ಷದಲ್ಲಿ ಅವರೇ ಸ್ವತಃ ತಮ್ಮ ಪ್ರದೇಶದ ಸಂಘದ ಅಧ್ಯಕ್ಷರು ಅಥವಾ ಈ ಕಾರ್ಯಕ್ರಮದ ಉಸ್ತುವಾರಿ ಹೊಣೆಹೊತ್ತಿರುವ ಶ್ರೀಪ್ರಫುಲ್ಲಚಂದ್ರರಾವ್, ಅಧ್ಯಕ್ಷರು, ಶ್ರೀ ಸ್ಥಾನಿಕ ಬ್ರಾಹ್ಮಣ ಸಂಘ, ಶಾರದಾ ಮಂಟಪ, ಕುಂಜಿಬೆಟ್ಟು, ಉಡುಪಿ, ಫೋನ್ ಸಂಖ್ಯೆ 0820-2520754ನಲ್ಲಿ ಸಂಪರ್ಕಿಸಿ ಇವರಿಗೇ ನೇರವಾಗಿ ತಲುಪಿಸಬಹುದು.

**-ಶ್ರೀಎನ್.ಕೆ.ಜಗನ್ನಿವಾಸರಾವ್, ಕಾರ್ಯದರ್ಶಿ**

## ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರು

2013–14 ನೇ ಸಾಲಿನಲ್ಲಿ ಶ್ರೀ ಸಭೆಯು ಸಮಾಜದ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳಿಂದ ಬರುವ ಅರ್ಹ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣವನ್ನು (ಬಿ.ಇ., ಎಮ್.ಇ., ಎಮ್.ಬಿ.ಬಿ.ಎಸ್., ಬಿ.ಡಿ.ಎಸ್., ಪಾಲಿಟೆಕ್ನಿಕ್, ಐ.ಟಿ.ಐ., ಎಮ್.ಎ., ಎಮ್.ಎಸ್‌ಸಿ., ಎಮ್.ಕಾಂ, ಸಿ.ಎ., ಬಿ.ಎಡ್., ಡಿ.ಎಡ್.,) ಪಡೆಯಲು ಸಾಲ ವಿದ್ಯಾರ್ಥಿ ವೇತನವನ್ನು ವಿತರಿಸಲಿದೆ. ಈ ಸೌಲಭ್ಯವನ್ನು ಪಡೆಯಲು ಸಮಾಜದ ಅರ್ಹ ವಿದ್ಯಾರ್ಥಿಗಳು ಬಿಳಿ ಹಾಳೆಯಲ್ಲಿ ìಕಾರ್ಯದರ್ಶಿ, ಶ್ರೀ ಸುಬ್ರಹ್ಮಣ್ಯ ಸಭಾ, ಮಂಗಳೂರುî ಇವರಿಗೆ ಅರ್ಜಿಯನ್ನು ಬರೆಯಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿಯ ಪ್ರತಿ ಹಾಗೂ ಈ ವರ್ಷದ ಕಲಿಕಾ ಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.

ಈ ಹಿಂದೆ ಸಾಲ ವಿದ್ಯಾರ್ಥಿ ವೇತನವನ್ನು ಪಡೆದುಕೊಂಡ ವಿದ್ಯಾರ್ಥಿಗಳು ಶಿಕ್ಷಣವನ್ನು ಮುಂದುವರಿಸಲು 2013–14ನೇ ಸಾಲಿನ ಸಾಲದ ಕಂತನ್ನು ಪಡೆಯಲು ìಶ್ರೀ ಸುಬಹ್ಮಣ್ಯ ಸಹಕಾರ ಸಂಘ, ಮಂಗಳೂರುî ಇವರನ್ನು ಸಂಪರ್ಕಿಸಲು ಕೋರಲಾಗಿದೆ.

**2013–14ನೇ ಸಾಲಿನಲ್ಲಿ ಪಿ ಯು ಸಿ ಮತ್ತು ಮೇಲ್ಪಟ್ಟ ತರಗತಿಯಲ್ಲಿ ಕಲಿಯುತ್ತಿರುವ ಸಮಾಜದ ಆರ್ಥಿಕವಾಗಿ ಹಿಂದುಳಿದಿರುವ ಕುಟುಂಬಗಳ ಅರ್ಹ ವಿದ್ಯಾರ್ಥಿಗಳಿಂದ ಸಾಮಾನ್ಯ ವಿದ್ಯಾರ್ಥಿ ವೇತನ ಪಡೆಯಲು ದಿನಾಂಕ 30–10–2013ರ ಒಳಗೆ ತಲುಪುವಂತೆ ಅರ್ಜಿಗಳನ್ನು ಕಾರ್ಯದರ್ಶಿ ಶ್ರೀ ಸುಬ್ರಹ್ಮಣ್ಯ ಸಭಾ ಮಂಗಳೂರು ಇವರಿಗೆ ಕಳುಹಿಸಿಕೊಡಲು ಕೋರಲಾಗಿದೆ. ಅರ್ಜಿಯೊಂದಿಗೆ ಹಿಂದಿನ ವರ್ಷದ ಅಂಕಪಟ್ಟಿ ಹಾಗೂ ಈ ವರ್ಷದ ಕಲಿಕಾಪ್ರಮಾಣ ಪತ್ರವನ್ನು ಲಗ್ತೀಕರಿಸಬೇಕು.**

**ಅರ್ಜಿ ಫಾರಂಗಳು ಉಡುಪಿ ಹಾಗೂ ದ ಕ ಜಿಲ್ಲಾ ನಮ್ಮ ಸಮಾಜದ ಸಂಘ ಸಂಸ್ಥೆಗಳಲ್ಲಿ ಲಭ್ಯವಿದೆ.**

ಕಾರ್ಯದರ್ಶಿ

## ಬೆಳ್ಮಣ್ಣಿನಲ್ಲಿ ಇಂಗ್ಲಿಷ್ ಸ್ಪೀಕಿಂಗ್ ಕ್ಲಾಸ್ ಹಾಗೂ ಪುಸ್ತಕ ವಿತರಣೆ



ಅದ್ವೈತ ಭಾರತೀಯ ಕಮ್ಯುನಿಟಿ ಡೆವಲಪ್‌ಮೆಂಟ್ ಟ್ರಸ್ಟ್, ಇನ್ನಾ, ಡಾ। ದಯಾನಂದ ಎಸ್ ರಾವ್ ನಿಧಿ ಮತ್ತು ಇನ್ನಾ ದಿನೇಶ್ ರಾವ್ ಎಜ್ಯುಕೇಶನ್ ಜೇಸೀ ಚಾರಿಟೇಬಲ್ ಟ್ರಸ್ಟ್ ಇವರ ಸಂಯುಕ್ತ ಆಶ್ರಯದಲ್ಲಿ 21ದಿನಗಳ ಇಂಗ್ಲಿಷ್ ಸ್ಪೀಕಿಂಗ್ ಕೋರ್ಸ್ ಹಾಗೂ ಎಲ್ಲಾಮಕ್ಕಳಿಗೆ ಉಚಿತ ಬರೆಯುವ ಪುಸ್ತಕ ವಿತರಣೆಯು ಇತ್ತೀಚೆಗೆ ಬೆಳ್ಮಣ್ಣು ಪದವಿ ಪೂರ್ವಕಾಲೇಜಿನಲ್ಲಿ ನೆರವೇರಿತು. ಡಾ। ದಯಾನಂದ ಎಸ್ ರಾವ್ ನಿಧಿಯಿಂದ 35ಸಾವಿರ ರೂ. ಹಾಗೂ ಎ.ಬಿ.ಸಿ.ಡಿ.ಮತ್ತುಇ. ಟ್ರಸ್ಟ್‌ನಿಂದ 1ಲಕ್ಷ 30ಸಾವಿರ ರೂ.ಗಳನ್ನು ಈ ಕಾರ್ಯಕ್ರಮಕ್ಕೆ ವಿನಿಯೋಗಿಸಲಾಯಿತು. ಉದಯವಾಣಿಯ ಮುಖ್ಯ ವರದಿಗಾರ ಮನೋಹರ್ ಪ್ರಸಾದ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಟ್ರಸ್ಟ್‌ನ ಅಧ್ಯಕ್ಷ ಚಂದ್ರಕಾಂತ ರಾವ್,ಉಪಾಧ್ಯಕ್ಷೆ ವಿಮಲಾ ದಿನೇಶ್ ರಾವ್,ಟ್ರಸ್ಟಿ ಡಾ। ಶ್ರೀಕಾಂತರಾವ್. ಲಕ್ಷ್ಮೀಕಾಂತರಾವ್, ಕಾರ್ಯದರ್ಶಿ ಶಶಿರೇಖಾ ರತ್ನಾಕರರಾವ್ , ಕೋಶಾಧಿಕಾರಿ ವೇದಾವತಿ ರಾವ್, ಜೇಸೀ ಅಧ್ಯಕ್ಷ ಪುನಾರು ರಘುನಾಥ, ತುಕಾರಾಮಶೆಟ್ಟಿ,ಪಿ. ಜಯಂತ್ ಮೊದಲಾದವರು ಉಪಸ್ಥಿತರಿದ್ದರು. ಕಾರ್ಯಕ್ರಮ ಸಂಯೋಜನೆ ಮಾಡಿದ ನಂದಳಿಕೆ ಸುಧಾಕರರಾಯರು ಪ್ರಾಸ್ತಾವಿಕ ಮಾತನಾಡಿದರು. ಕೆ.ಅನಿಲ್ ಕುಮಾರ್ ವಂದಿಸಿದರು.

### ಸೌರ ಋಗುಪಾಕರ್ಮ

**ತಾ.20-08-2013ರಂದು ಮಂಗಳವಾರ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದಲ್ಲಿ ಬೆಳಿಗ್ಗೆ ಗಂಟೆ 6-30ರಿಂದ ಉಪಾಕರ್ಮ ಕಾರ್ಯಕ್ರಮವು ಪ್ರಾರಂಭವಾಗಲಿದೆ. ಸಮಾಜ ಬಾಂಧವರು ಸಮಯಕ್ಕೆ ಸರಿಯಾಗಿ ಬಂದು ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿ ವಿನಂತಿ. ಭಾಗವಹಿಸುವವರು ಹೂ, ತುಳಸಿ, ಕೌಳಿಗೆ ಸೌಟು, ಹರಿವಾಣ ತರಬೇಕಾಗಿ ವಿನಂತಿ. (ಬೆಳಿಗ್ಗೆ ಉಪಾಹಾರ ವ್ಯವಸ್ಥೆ ಇದೆ).**

**ಪ್ರಾಯೋಜಕರು : ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.)**

**-ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ಆಡಳಿತ ಮಂಡಳಿ**

### ವೈದಿಕ ಶಿಬಿರ

**ತಾ.16-08-2013ರಿಂದ 23-10-2013ರ ವರೆಗೆ ಬ್ರಹ್ಮಶ್ರೀ ಪಾವಂಜೆ ವಾಗೀಶ ಶಾಸ್ತ್ರಿಯವರ ನೇತೃತ್ವದಲ್ಲಿ ಪಾದೆಬೆಟ್ಟು ಶ್ರೀ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ಮಕ್ಕಳ ವೈದಿಕ ಶಿಬಿರವು ನೆರವೇರಲಿದೆ. ಶಿಬಿರದಲ್ಲಿ ಉಪನ್ಯಾಸದ ನಿಮಿತ್ತ ವೈದಿಕ ಅರ್ಚಕರು ಭಾಗವಹಿಸಲಿದ್ದಾರೆ. ಶಿಬಿರಾರ್ಥಿಗಳು ಹಾಗೂ ಸಮಾಜ ಬಾಂಧವರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಶಿಬಿರವನ್ನು ಯಶಸ್ವಿಗೊಳಿಸಬೇಕಾಗಿ ವಿನಂತಿ.**

**ಸೂಚನೆ:** 1. ಶಿಬಿರಾರ್ಥಿಗಳಿಗೆ ಊಟೋಪಚಾರ, ಉಳಿದುಕೊಳ್ಳಲು ವ್ಯವಸ್ಥೆ ಇದೆ.
2. ಶಿಬಿರಾರ್ಥಿಗಳು ಕೌಳಿಗೆ ಸೌಟು, ಹರಿವಾಣ ಮತ್ತು ದಿನನಿತ್ಯದ ವಸ್ತುಗಳನ್ನು ತರತಕ್ಕದ್ದು.
3. ಜಪ ಮತ್ತು ಪೂಜಾ ವಿಧಾನ ಕಲಿಯಬಯಸುವ ದೊಡ್ಡವರಿಗೂ ಅವಕಾಶವಿದೆ.

**ಮಾಹಿತಿಗಾಗಿ ಸಂಪರ್ಕ :**

**ಕೃಷ್ಣರಾಜ ಭಟ್ (9980195355), ಸುಧಾಕರ ಬೆಳ್ಳೆ (9845193103)**

**ಕಾರ್ಯಕ್ರಮದ ಪ್ರಾಯೋಜಕರು : ಸ್ಥಾನಿಕ ಬ್ರಾಹ್ಮಣ ಸಭಾ (ರಿ.), ಮಹಿಳಾವೇದಿಕೆ, ಪಡುಬಿದ್ರಿ ಮತ್ತು ಶ್ರೀ ವಿಷ್ಣುಮೂರ್ತಿ ದೇವಸ್ಥಾನದ ಆಡಳಿತ ಮಂಡಳಿ, ಪಾದೆಬೆಟ್ಟು**

### ದಿ। ಕೆಡೆಂಜಿ ಭಾಗೀರಥಿ ದಾಮೋದರ ಶಾಸ್ತ್ರಿ ಪ್ರತಿಷ್ಠಾನ, ಕುಳಾಯಿ ಪ್ರತಿಭಾ ಪುರಸ್ಕಾರ

2012–13ನೇ ಸಾಲಿನ ಎಸ್ ಎಸ್ ಎಲ್ ಸಿ ಹಾಗೂ ದ್ವಿತೀಯ ಪಿ ಯು ಸಿ ಪರೀಕ್ಷೆಯಲ್ಲಿ 85%ಕ್ಕೂ ಹೆಚ್ಚು ಅಂಕ ಗಳಿಸಿದ ದ ಕ ಮತ್ತು ಉಡುಪಿ ಜಿಲ್ಲೆಗಳ ಸರ್ವ ವಿದ್ಯಾರ್ಥಿಗಳನ್ನು ಮೇಲಿನ ಪ್ರತಿಷ್ಠಾನದ ವತಿಯಿಂದ ಮಂಗಳೂರಿನ ಶ್ರೀ ಸುಬ್ರಹ್ಮಣ್ಯ ಸಭೆಯಲ್ಲಿ ನಡೆಯುವ ನಾಡಹಬ್ಬದಂದು ಪುರಸ್ಕರಿಸಲಾಗುವುದು. ವಿದ್ಯಾರ್ಥಿಗಳು ಅಂಕ ಪಟ್ಟಿಯ ನಕಲು, ವಿಳಾಸ , ದೂರವಾಣಿ ಸಂಖ್ಯೆ ಮೊದಲಾದ ವಿವರವನ್ನು 30–09–2013ರ ಒಳಗಾಗಿ ಮೇಲಿನ ವಿಳಾಸಕ್ಕೆ ಕಳುಹಿಸಲು ಕೋರಲಾಗಿದೆ. ನಾಡಹಬ್ಬದ ದಿನಾಂಕವನ್ನು ಮುಂದೆ ತಿಳಿಸಲಾಗುವುದು.

**–ಕೆ.ಸದಾಶಿವ ಶಾಸ್ತ್ರಿ, ಕುಳಾಯಿ.**

### ಸೋಣಡೊಂಜಿ ದಿನ

**ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ಪಡುಬಿದ್ರಿ ಇದರ ಮಹಿಳಾ ವೇದಿಕೆಯ ವತಿಯಿಂದ ತಾ.15-09-2013ನೇ ಆದಿತ್ಯವಾರ ಬೆಳಿಗ್ಗೆ 10-30ರಿಂದ ಶ್ರೀ ಬಾಲಗಣಪತಿ ಪ್ರಸನ್ನ ಪಾರ್ವತಿ ದೇವಸ್ಥಾನದ ವಠಾರದಲ್ಲಿ "ಸೋಣಡೊಂಜಿ ದಿನ" ಕಾರ್ಯಕ್ರಮವು ನಡೆಯಲಿರುವುದು.**

**ನಮ್ಮ ವ್ಯಾಪ್ತಿಯ 80 ಸಂವತ್ಸರಗಳನ್ನು ದಾಟಿದ ನಮ್ಮ ಸಮಾಜದ ಮಹಿಳೆಯರನ್ನು ಗುರುತಿಸಿ ಗೌರವಿಸುವ ಕಾರ್ಯಕ್ರಮ ನಡೆಯಲಿರುವುದು. ಅಲ್ಲದೆ ಮಹಿಳಾ ವೇದಿಕೆಯ ಸದಸ್ಯರಿಂದ ತಯಾರಿಸಲ್ಪಟ್ಟ ತಿಂಡಿ, ತಿನಿಸುಗಳು ಹಾಗೂ ಭೋಜನವನ್ನು ಸವಿಯುವ ಉದ್ದೇಶ ನಮ್ಮ ಸಮಾಜ ಬಾಂಧವರಿಗೆಲ್ಲ ಪ್ರೀತಿಯ ಕರೆಯೋಲೆ. -ಮಹಿಳಾ ವೇದಿಕೆ**

## ಕಾಂತಾವರ ಭೋಜರಾಯರಿಗೆ ಸನ್ಮಾನ



ಶತಮಾನದ ಅಂಚಿನಲ್ಲಿರುವ ನಿವೃತ್ತ ಕನ್ನಡ ವಿದ್ವಾನ್ , ಸಾಮಾಜಿಕ ಕಾರ್ಯಕರ್ತ ಶ್ರೀಯುತ ಭೋಜರಾಯರನ್ನು ಕಾರ್ಕಳದ ಶಂಕರ ಪ್ರತಿಸ್ಠಾನ (ರಿ) ಇದರ ವತಿಯಿಂದ ಸನ್ಮಾನಿಸಲಾಯಿತು. ಶ್ರೀಮತಿ ಸುಮನಾ ಜಗದೀಶರ ಪ್ರಾರ್ಥನೆಯೊಂದಿಗೆ ಪ್ರಾರಂಭಗೊಂಡ ಕಾರ್ಯಕ್ರಮದಲ್ಲಿ ಬೆಳುವಾಯಿ ಶ್ರೀಪತಿರಾಯರು ಸ್ವಾಗತಿಸಿದರು. ನಿವೃತ್ತ ಪ್ರಾಂಶುಪಾಲ ಅತ್ತೂರು ರಾಮಮೋಹನ ರಾವ್, ಮುನಿಯಾಲು ಶುಭಾಶಂಸನೆ ಗೈದರು. ಮಹಿಳಾ ವಿಭಾಗದ ಅಧ್ಯಕ್ಷೆ ಸಾವಿತ್ರಿ ಮನೋಹರ್ ಸನ್ಮಾನಪತ್ರ ವಾಚಿಸಿದರು. ಶ್ರೀ ಭೋಜರಾಯರ ಪುತ್ರಿ,ರಾಜ್ಯ ಪ್ರಶಸ್ತಿ ವಿಜೇತ ನಿವೃತ್ತ ಶಿಕ್ಷಕಿ ಶ್ರೀಮತಿ ಸರೋಜಿನಿ ನಾಗಪ್ಪಯ್ಯ ಸಂದರ್ಭೋಚಿತವಾಗಿ ಮಾತನಾಡಿದರು. ಕಾರ್ಯದರ್ಶಿ ನಕ್ರೆ ಶಿವರಾವ್ ಧನ್ಯವಾದ ನೀಡಿದರು.

## ಶ್ರೀ ಸುಬ್ರಹ್ಮಣ್ಯ ಸಭಾದ ಯುವ ವೇದಿಕೆ ಮತ್ತು ಮಹಿಳಾವೇದಿಕೆಗಳ ಪದಾಧಿಕಾರಿಗಳ ಆಯ್ಕೆ

ಶ್ರೀ ಸಭಾದಲ್ಲಿ ಯುವ ವೇದಿಕೆ ಹಾಗೂ ಮಹಿಳಾ ವೇದಿಕೆಗಳ ಮಹಾಸಭೆಯಲ್ಲಿ ಯುವ ವೇದಿಕೆಯ ನೂತನ ಅಧ್ಯಕ್ಷರಾಗಿ ಶ್ರೀ ವಿದ್ಯಾರಣ್ಯ ಕೊಲ್ಲಿಪಾಲ್, ಉಪಾಧ್ಯಕ್ಷರಾಗಿ ಶ್ರೀ ನಾಗರಾಜ್ ವರ್ಕಾಡಿ, ಕಾರ್ಯದರ್ಶಿಯಾಗಿ ಶ್ರೀ ಸುರೇಶ್ ಕೆ. ಆಯ್ಕೆಯಾದರು. ಮಹಿಳಾ ವೇದಿಕೆಯ ಅಧ್ಯಕ್ಷೆಯಾಗಿ ಶ್ರೀಮತಿ ಶೈಲಜಾ ಶ್ರೀಕಾಂತ್, ಉಪಾಧ್ಯಕ್ಷೆಯಾಗಿ ಶ್ರೀಮತಿ ಅರುಣಾ ಸೋಮಶೇಖರ್, ಕಾರ್ಯದರ್ಶಿ ಯಾಗಿ ಶ್ರೀಮತಿ ಕುಸುಮಾ ನವೀನ್ ಕುಮಾರ್ ಆಯ್ಕೆಯಾದರು. ಶ್ರೀ ಸಭಾದ ಕಾರ್ಯದರ್ಶಿ ಶ್ರೀ ಕರುಣ್ ರಾವ್ ಬೆಳ್ಳೆ ಪ್ರಸ್ತಾವನೆಗೈದರು. ಜೊತೆ ಕಾರ್ಯದರ್ಶಿ ಶ್ರೀ ಅನಿಲ್ ರಾವ್ ಬಿ. ಎಸ್. ಆಯ್ಕೆಗಳನ್ನು ಘೋಷಿಸಿದರು. ನಿಕಟಪೂರ್ವ ಅಧ್ಯಕ್ಷರಾದ ಶ್ರೀ ಪಿ. ಶ್ರೀಕಾಂತ್ ರಾವ್ ಕಳೆದ 3 ವರ್ಷಗಳ ಅವಧಿಯ ಕಾರ್ಯಕ್ರಮಗಳ ಸಹಕಾರಕ್ಕಾಗಿ ಸರ್ವರಿಗೂ ವಂದಿಸಿ, **"ಆಟಿತೊ ಆಟ ಕೂಟ"** ದಂತಹ ವಿಶಿಷ್ಟ ಕಾರ್ಯಕ್ರಮಗಳು ಇನ್ನಷ್ಟು ಜೋಡಣೆಗೊಳ್ಳಲಿ ಎಂದು ನೂತನ ಸಮಿತಿಗೆ ಅಭಿನಂದನೆ ಸಲ್ಲಿಸಿದರು. ನೂತನ ಅಧ್ಯಕ್ಷ ಹಾಗೂ ಅಧ್ಯಕ್ಷೆಯರು ಮುಂದಿನ ಕಾರ್ಯಕ್ರಮಗಳಿಗೆ ಸರ್ವರ ಸಹಕಾರ ಬಯಸುತ್ತಾ ಆಯ್ಕೆಗಾಗಿ ಧನ್ಯವಾದ ನೀಡಿದರು.

ವರದಿ : **ಪಿ. ಶ್ರೀಕಾಂತ್ ರಾವ್, ಮಂಗಳೂರು**

## ಅಂಡಮಾನ್ ಪ್ರವಾಸದಲ್ಲಿ ಸಾವಿತ್ರಿ ಮನೋಹರ್



ಕರ್ನಾಟಕ ರಾಜ್ಯ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಆಶ್ರಯದಲ್ಲಿ ಅಂಡಮಾನ್‌ನ ಪೋರ್ಟ್‌ಬ್ಲೇರ್‌ನಲ್ಲಿ ನಡೆದ ಭಾರತ್ ಸ್ಕೌಟ್ ಗೈಡ್ಸ್ ನಾಯಕ ತರಬೇತಿಗಾಗಿ ಉಡುಪಿ ಜಿಲ್ಲೆಯ ತಂಡವು ಪಾಲ್ಗೊಂಡಿತ್ತು. ಈ ನಾಯಕ ತರಬೇತಿ ತಂಡದಲ್ಲಿ ಉಡುಪಿಜಿಲ್ಲೆಯ ಬೇರೆ ಬೇರೆ ನಾಯಕ ತರಬೇತಿದಾರರ ಜೊತೆ ನಮ್ಮ ಸಮಾಜದ ಕಾರ್ಕಳದ ಶ್ರೀಮತಿ ಸಾವಿತ್ರಿ ಮನೋಹರ್ ಭಾಗವಹಿಸಿದ್ದರು.

## ಮೂಡುಕೇರಿ ಶ್ರೀ ಸೋಮೇಶ್ವರ ದೇವಳದಲ್ಲಿ ಶತರುದ್ರಾಭಿಷೇಕ

ಬಾರಕೂರು ಮೂಡುಕೇರಿ ಶ್ರೀ ಸೋಮೇಶ್ವರ ದೇವರ ಸನ್ನಿಧಿಯಲ್ಲಿ ಮಸ್ತಿಬೈಲು ಅನಂತ ಪದ್ಮನಾಭ ರಾವ್ ಇವರ ಸೇವೆಯಾಗಿ ಶತರುದ್ರಾಭಿಷೇಕ, 110 ಬೊಂಡಾಭಿಷೇಕ, ಷಣ್ಣಾಳಿಕೇರ ಗಣಯಾಗ, ಸಪ್ತಶತಿ ಚಂಡಿಕಾಪಾರಾಯಣ, ಬ್ರಾಹ್ಮಣ ಸುಹಾಸಿನೀ ಆರಾದನೆ ನೆರವೇರಿತು.

# ಜಗದ್ಗುರುಗಳವರ ಚಾತುರ್ಮಾಸ್ಯವ್ರತ

- ಡಾ| ಎಚ್.ವಿ.ನರಸಿಂಹಮೂರ್ತಿ,
ವಿಶ್ರಾಂತ ಪ್ರಾಧ್ಯಾಪಕರು
ಕುಂದಾಪುರ-576 201.



'ಚಾತುರ್ಮಾಸ್ಯ' ಎಂಬ ಶಬ್ದವೇ ಸೂಚಿಸುವಂತೆ ನಾಲ್ಕು ತಿಂಗಳ ವ್ರತ ಎಂಬುದು ಇದರ ಸಾಮನ್ಯಾರ್ಥ. ಆದರೆ 'ಪಕ್ಷ್ಯೋವೈ ಮಾಸಃ' ಎಂಬ ಶ್ರುತಿವಾಕ್ಯಕ್ಕನು ಗುಣವಾಗಿ ಒಂದು ಪಕ್ಷವನ್ನೇ ಒಂದು ತಿಂಗಳೆಂದು ಭಾವಿಸಿದಾಗ ಇದು ನಾಲ್ಕು ಪಕ್ಷಗಳೆಂಬ ಅರ್ಥವನ್ನು ಕೊಡುತ್ತದೆ. ಯತಿಗಳು ಪರಿವ್ರಾಜಕರು; ಅವರು ಸ್ವಧರ್ಮದಂತೆ ದೇಶಸಂಚಾರ ಮಾಡುತ್ತಿರುತ್ತಾರೆ. ಆದರೆ ಮಳೆಗಾಲದಲ್ಲಿ ಅವರು ಸಂಚಾರ ಮಾಡಬಾರದು. ಇದಕ್ಕೆ ಕಾರಣ ಅಹಿಂಸೆಯ ಪರಿಪಾಲನೆ. ಆಷಾಢದ ಮಳೆಗೆ ಎಲ್ಲೆಲ್ಲೂ ಕ್ರಿಮಿ- ಕೀಟಗಳು ಹುಟ್ಟಿಕೊಂಡಿರುತ್ತವೆ. ಕೃಷಿಕರು ಬಿತ್ತನೆ ಆರಂಭಿಸುತ್ತಾರೆ. ಅನೇಕ ಬಗೆಯ ಸಸ್ಯಗಳು ಮೊಳಕೆಯೊಡೆದು, ಭೂಮಿಯನ್ನು ಭೇದಿಸಿ ಹುಟ್ಟಿಕೊಳ್ಳುತ್ತವೆ. ನಿರಂತರ ಮಳೆಯಿಂದಾಗಿ ಭೂಮಿಯೂ ಮೆದುವಾಗುತ್ತದೆ. ಹಾಗಾಗಿ ಆಗ ಸಂಚರಿಸಿದರೆ ತಿಳಿದೋ, ತಿಳಿಯದೆಯೋ ಹಿಂಸೆ ಮಾಡಿದಂತಾಗುತ್ತದೆ. ಅಹಿಂಸೆ ಸನ್ಯಾಸಾಶ್ರಮಿಯ ಪ್ರಮುಖವ್ರತ. ಚಾತುರ್ಮಾಸ್ಯ ಸಂಕಲ್ಪದಲ್ಲಿ ಹೇಳುವಂತೆ 'ಸಾಮಾನ್ಯವಾಗಿ ಮಳೆಗಾಲದಲ್ಲಿ ದಾರಿ ಅನೇಕ ಸೂಕ್ಷ್ಮಜೀವಿಗಳಿಂದ ತುಂಬಿರುತ್ತದೆ. ಅವುಗಳಿಗೆ ಹಿಂಸೆ ಮಾಡುಬಾರದಾದ್ದರಿಂದ ಶ್ರುತಿ ಸಮ್ಮತವಾದ ನಾಲ್ಕು ಪಕ್ಷಗಳ ಕಾಲ ಒಂದೇ ಸ್ಥಳದಲ್ಲಿ ಇರುತ್ತೇವೆ' (ಪ್ರಾಯೇಣ ಪ್ರಾವೃಷಿಪ್ರಾಣಿ ಸಂಕಲ್ಪಂ ವರ್ತ್ಯದೃಶ್ಯತೇ ಅತಸ್ತೇಷಾಂ ಅಹಿಂಸಾರ್ಥಂ ಪಕ್ಷಾನ್ ವೈ ಶ್ರುತಿ ಸಂಶ್ರಯಾನ್, ಸ್ಥಾಸ್ಯಾಮಶ್ಚತುರೋ ಮಾಸನ್............||) ಎಂದು ಈ ವೃತವನ್ನು ಆರಂಭಿಸಲು ಸಂಕಲ್ಪಿಸುತ್ತಾರೆ. ಆದ್ದರಿಂದ ಯತಿಗಳು ಪಾಲಿಸಬೇಕಾದ ಅಹಿಂಸಾ ಧರ್ಮವೇ ಚಾತುರ್ಮಾಸ್ಯವ್ರತಕ್ಕೆ ಮೂಲಕಾರಣ.

ಚಾತುರ್ಮಾಸ್ಯವ್ರತಕ್ಕೆ ಇನ್ನೊಂದು ಕಾರಣವೂ ಇದೆ. ಸ್ಥಿತಿಕರ್ತನಾದ ಮಹಾ ವಿಷ್ಣುವು ಆಷಾಢಮಾಸದಿಂದ ಕಾರ್ತಿಕಮಾಸದವರೆಗೆ ಅಂತರ್ಮುಖಿಯಾಗಿ ದಿವ್ಯನಿದ್ರೆಯಲ್ಲಿ ಮಗ್ನನಾಗಿರುತ್ತಾನೆ. ಆ ಸಮಯದಲ್ಲಿ ಯತಿಗಳಾದವರು ಅಂತರ್ಮುಖಿಗಳಾಗಿ ತಮ್ಮ ಸಾಧನೆಯಲ್ಲಿ ಹೆಚ್ಚು ತೊಡಗಬೇಕು. ಹಾಗೆ ಮಾಡಿದಾಗ ಸಮಾಜ ಹಸನಾಗಲು ಸಾಧ್ಯ; ಸಾತ್ತ್ವಿಕ ಶಕ್ತಿಯ ಸಂಚಾರ ಎಲ್ಲೆಡೆ ಆಗಲು ಸಾಧ್ಯ.

**ವ್ಯಾಸ ಪೂರ್ಣಿಮಾ**

ಪುಣ್ಯಪ್ರದವಾದ ಆಷಾಢಶುದ್ಧ ಹುಣ್ಣಿಮೆಯನ್ನು 'ವ್ಯಾಸ ಪೂರ್ಣಿಮಾ' ಅಥವಾ 'ಗುರುಪೂರ್ಣಿಮಾ' ಎಂದು ಕರೆಯುತ್ತಾರೆ. ಏಕೆಂದರೆ ಬ್ರಹ್ಮವಿದ್ಯೆಯನ್ನು ಉಪದೇಶಿಸಿದ ಗುರುಪರಂಪರೆಯಲ್ಲಿ ಭಗವಾನ್ ವೇದವ್ಯಾಸರು ಅಗ್ರಗಣ್ಯರು. 'ವೇದಾನ್ ವಿವ್ಯಾಸ ಯಸ್ಮಾತ್‌ಸಃ ವೇದ ವ್ಯಾಸ ಇತೀರಿತಃ' ಎಂಬಂತೆ ಅನಂತವಾದ ವೇದವನ್ನು ನಾಲ್ಕು ವಿಭಾಗಗಳನ್ನಾಗಿ ವಿಭಾಗಿಸಿದ್ದರಿಂದಲೇ ಅವರನ್ನು 'ವೇದವ್ಯಾಸ' ಎಂದು ಕರೆಯಲಾಗುತ್ತದೆ. ಪಂಚಮವೇದವೆಂದೇ ಪ್ರಸಿದ್ಧವಾದ ಮಹಾಭಾರತ, ಅಷ್ಟಾದಶ ಪುರಾಣಗಳು, ಪ್ರಸ್ಥಾನತ್ರಯಗಳಲ್ಲಿ ಒಂದಾದ ಬ್ರಹ್ಮಸೂತ್ರ ñ ಇವುಗಳನ್ನೆಲ್ಲ ರಚಿಸಿದವರು ಅವರು. ಆದ್ದರಿಂದ ಗುರು ಪೂರ್ಣಿಮೆಯಂದು ಪವಿತ್ರ ಭಾರತದ ಎಲ್ಲ ಸಂಪ್ರದಾಯಗಳ ಯತಿಪರಂಪರೆ ಯವರೂ ಅವರನ್ನು ವಿಶೇಷವಾಗಿ ಪೂಜಿಸುತ್ತಾರೆ. ಚಾತುರ್ಮಾಸ್ಯವ್ರತವು ಆರಂಭವಾಗುವುದು ಈ ಗುರುಪೂರ್ಣಿಮೆ ಯಂದು ವ್ರತನಿರತರಾದ ಯತಿಗಳು ಈ ಕಾಲದಲ್ಲಿ ತಮ್ಮ ಸಾಧನೆ-ತಪಸ್ಸುಗಳ ನೆಲಗಟ್ಟನ್ನು ಭದ್ರಗೊಳಿಸಲು ಅಧ್ಯಯನ-ಅಧ್ಯಾಪನಗಳ ಮೂಲಕ, ಯಮ-ನಿಯಮಾದಿ ಯೋಗ ಸಾಧನೆಗಳ ಮಾಖಾಂತರ ಮತ್ತು ಶಾಸ್ತ್ರೋಕ್ತ ವ್ರತೋಪವಾಸಗಳಿಂದ ಚಂಚಲವಾದ ಮನಸ್ಸನ್ನು ನಿರ್ದಿಷ್ಟ ಸಾಧನೆಯತ್ತ ಒಯ್ಯುವ ಪ್ರಯತ್ನದಲ್ಲಿ ನಿರತರಾಗುತ್ತಾರೆ. ಸರಳ ಜೀವನ-ಉನ್ನತ ಚಿಂತನ ಅವರದಾಗಿರುತ್ತದೆ. ಅಧ್ಯಯನ-ಅಧ್ಯಾಪನ ಮತ್ತು ಅನುಷ್ಠಾನಗಳತ್ತ ತಮ್ಮ ಗಮನವನ್ನು ವಿಶೇಷವಾಗಿ ಹರಿಸುತ್ತಾರೆ.

**ಜಗದ್ಗುರುಗಳವರ ಚಾತುರ್ಮಾಸ್ಯ ವ್ರತ**

ದಕ್ಷಿಣಾಮ್ನಾಯ ಶೃಂಗೇರಿ ಶ್ರೀ ಶಾರದಾಪೀಠದ ಜಗದ್ಗುರುಗಳವರು ಚಾತುರ್ಮಾಸ್ಯವ್ರತದ ಪ್ರಕ್ರಿಯೆಗಳನ್ನು ಆರಂಭಿಸುವ ಮೊದಲು ಆಷಾಢಮಾಸದ ಶುಕ್ಲಪಕ್ಷದ ಪ್ರದೋಷ ದಿನದಂದು ಪೂರ್ವಸಂಪ್ರದಾಯದಂತೆ ಸಂಜೆ ಹೊತ್ತು ಮಲ್ಲಿಕಾರ್ಜುನ ಬೆಟ್ಟಕ್ಕೆ ವೇದ ಘೋಷದೊಂದಿಗೆ ತೆರಳಿ ಶ್ರೀಮಲಹಾನಿಕರೇಶ್ವರ ಸ್ವಾಮಿಯ ದರ್ಶನ ಮಾಡುತ್ತಾರೆ. ವ್ಯಾಸಪೂರ್ಣಿಮೆಯೆಂದು ಬೆಳಗ್ಗೆ ಶ್ರೀ ಮಠದ ಆವರಣದಲ್ಲಿರುವ ಎಲ್ಲ ದೇವಾಲಯಗಳಿಗೂ ಚಿತ್ತೈಸಿ, ದೇವರ ದರ್ಶನ ಮಾಡಿದ ನಂತರ ಪೂಜಾಭವನದ ಕಡೆಗೆ ಆಗಮಿಸುತ್ತಾರೆ. ಅಷ್ಟು ಹೊತ್ತಿಗಾಗಲೇ ಸಹಸ್ರಾರು ಮಂದಿ ಭಕ್ತರು ಈ ಪೂಜಾ ಮಂದಿರದಲ್ಲಿ ದಟ್ಟಿಸಿರುತ್ತಾರೆ. ಈ ಮಂದಿರದಲ್ಲಿನ ವ್ಯಾಸಮಂಟಪವನ್ನು ವಿಶೇಷವಾಗಿ ಅಲಂಕರಿಸಿರುತ್ತಾರೆ. ಸೇರಿದ ಭಕ್ತರೆಲ್ಲ ಮೈಯೆಲ್ಲ ಕಣ್ಣಾಗಿ ಶ್ರೀಶ್ರೀಗಳವರ ಆಗಮನ ಮತ್ತು ಪೂಜಾ ವಿಧಿ ವಿಧಾನಗಳನ್ನು ವೀಕ್ಷಿಸಲು ಸಜ್ಜಾಗಿರುತ್ತಾರೆ.

ಜಗದ್ಗುರುಗಳವರು ಮಾಡುವ ಈ ಪೂಜೆಯಲ್ಲಿ ಮೂರು ಗುಂಪುಗಳ ಗುರುಪರಂಪರೆಗೆ ಪ್ರಾಧಾನ್ಯ. ಒಂದೊಂದು ಗುಂಪಿನಲ್ಲಿ ಐವರು ಆಚಾರ್ಯರು; ಈ ಗುಂಪುಗಳಿಗೆ ಕೃಷ್ಣ ಪಂಚಕ, ವ್ಯಾಸಪಂಚಕ ಮತ್ತು ಶಂಕರಾಚಾರ್ಯ ಪಂಚಕ ಎಂದು ಹೆಸರು. ಶ್ರೀಕೃಷ್ಣ, ಸನಕ, ಸುನಂದನ, ಸನತ್ಕುಮಾರ ಮತ್ತು ಸನತ್ಸು ಜಾತ- ಇವರು ಕೃಷ್ಣಪಂಚಕದಲ್ಲಿ ಸೇರುತ್ತಾರೆ. ವ್ಯಾಸಪಂಚಕದಲ್ಲಿ ಶ್ರೀವೇದವ್ಯಾಸರು ಜೈಮಿನಿ ಮಹರ್ಷಿ ಪೈಲ ಮಹರ್ಷಿ, ವೈಶಂಪಾಯನ ಮಹರ್ಷಿ ಮತ್ತು ಸುಮಂತು ಮಹರ್ಷಿಗಳನ್ನೂ, ಆಚಾರ್ಯ ಪಂಚಕದಲ್ಲಿ ಶ್ರೀ ಶಂಕರಾಚಾರ್ಯರು ಮತ್ತು ಅವರ ಶಿಷ್ಯರಾದ ಸುರೇಶ್ವರಾಚಾರ್ಯ, ಹಸ್ತಾಮಲತಾಚಾರ್ಯ, ತೋಟಕಾಚಾರ್ಯ ಮತ್ತು ಪದ್ಮಪಾದಾಚಾರ್ಯರನ್ನು ಪೂಜಿಸಲಾಗುತ್ತದೆ. ಶೃಂಗೇರಿ ಶ್ರೀಮಠದ ಪರಂಪರಾಗತ ಸಂಪ್ರದಾಯದಂತೆ ಶ್ರೀ ಶ್ರೀಗಳವರು ಈ ಮೂರು ಪಂಚಕಗಳಿಗೂ ಪ್ರತ್ಯೇಕವಾಗಿ ಪೂಜೆಗಳನ್ನು ಸಲ್ಲಿಸುತ್ತಾರೆ. ಈ ಪೂಜೆಯ ನಂತರ ಅವರು ಶೃಂಗೇರಿ ಜಗದ್ಗುರು ಪರಂಪರಾ ಸ್ತೋತ್ರವನ್ನು ಪಠಿಸುತ್ತಾ, ಗುರುಪರಂಪರೆಯ ಎಲ್ಲ ಯತಿಗಳನ್ನೂ ಪೂಜಿಸುತ್ತಾರೆ.

ಈ ಗುರುಪರಂಪರೆಯು ಪ್ರಾರಂಭ ವಾಗುವುದು ಸದಾಶಿವನಿಂದ. ನಂತರ ಶ್ರೀಮಹಾವಿಷ್ಣು, ಶ್ರೀಚತುರ್ಮುಖ ಬ್ರಹ್ಮ, ಶ್ರೀ ವಸಿಷ್ಠ ಮಹರ್ಷಿ, ಶ್ರೀ ಶಕ್ತಿಮಹರ್ಷಿ, ಶ್ರೀಪರಾಶರ ಮಹರ್ಷಿ, ಶ್ರೀವೇದವ್ಯಾಸ ಮಹರ್ಷಿ, ಶ್ರೀ ಶುಕಮಹರ್ಷಿ, ಶ್ರೀಗೌಡಪಾದಾಚಾರ್ಯರು, ಶ್ರೀಗೋವಿಂದ ಭಗವತ್ಪಾದಾಚಾರ್ಯರು ಮತ್ತು ಶ್ರೀ ಆದಿ ಶಂಕರಾಚಾರ್ಯರ ನಂತರ ಶೃಂಗೇರಿ ಶ್ರೀ ಶಾರದಾಪೀಠದ ಮೊದಲ ಗುರುಗಳಾದ ಶ್ರೀಸುರೇಶ್ವರಾಚಾರ್ಯರಿಂದ ಮೊದಲ್ಗೊಂಡು ನಿಕಟಪೂರ್ವಗುರುಗಳಾದ ಶ್ರೀಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರೆಗೆ ಮೂವ್ವತ್ತೈದು ಮಂದಿ ಯತಿ ವರೇಣ್ಯರಿಗೆ ಪುಸ್ತುತ ಪೀಠಾಧಿಪತಿಗಳಾಗಿರುವ ಶ್ರೀ ಶ್ರೀ ಭಾರತೀ ತೀರ್ಥಮಹಾಸ್ವಾಮಿಗಳವರು ಪೂಜೆ ಸಲ್ಲಿಸುತ್ತಾರೆ.

ಈ ವ್ಯಾಸ ಪೂಜಾವಿಧಿ ಮುಗಿದ ನಂತರ ಶ್ರೀಶ್ರೀಗಳವರು ಹಿಂದೆ ಹೇಳಲಾದಂತೆ ಪರಿವ್ರಾಜಕರಾದ ತಾವು ನಾಲ್ಕು ತಿಂಗಳ ಕಾಲ ಒಂದೇ ಸ್ಥಳದಲ್ಲಿ ಇರಲು ಕಾರಣ ತಿಳಿಸಿ 'ನಾವುಲೇ ಇಲ್ಲಿ ಇದ್ದು ವ್ರತ ಕೈಗೊಳ್ಳುತ್ತೇವೆ' ಎಂದು ಸಂಕಲ್ಪ ಮಾಡುತ್ತಾರೆ. ಆಗ ಶ್ರೀಮಠದ ಶಿಷ್ಯರು 'ಗುರುಗಳು ಸುಖವಾಗಿ ಇಲ್ಲಿ ವಾಸ ಮಾಡಬೇಕು. ಇದರಿಂದ ನಾವೆಲ್ಲರೂ ಕೃತಾರ್ಥರಾಗುತ್ತೇವೆ. ಚಾತುರ್ಮಾಸ್ಯವ್ರತದ ಅವಧಿಯಲ್ಲಿ ನಾವೆಲ್ಲರೂ ಯಥಾಶಕ್ತಿ ಗುರುಸೇವೆ ಮಾಡುತ್ತೇವೆ. ನಿವಸಂತು ಸುಖೇನಾತ್ರ ಗಮಿಷ್ಯಾಮಃ ಕೃತಾರ್ಥತಾಮ್| ("ಯಥಾವಿಹಿತ ಶುಶ್ರೂಷಾಂ ಕರಿಷ್ಮಾಲೋವಯಂ ಮುದಾ") ñ ಎಂದು ಧನ್ಯತಾ ಭಾವದಿಂದ ವಿನಂತಿಸಿಕೊಳ್ಳುತ್ತಾರೆ.

ಸಂಕಲ್ಪದ ನಂತರ ಶ್ರೀಶ್ರೀಗಳವರ ಪಾದುಕೆಗಳಿಗೆ ಶ್ರೀಮಠದ ಪುರೋಹಿತರು ಪೂಜೆ ಸಲ್ಲಿಸುತ್ತಾರೆ. ಶೃಂಗಪುರ, ಸಚ್ಚಿದಾನಂದ ಪುರ, ನರಸಿಂಹಪುರ ಮತ್ತು ವಿದ್ಯಾರಣ್ಯಪುರದ ಮಹಾಜನರು ಶ್ರೀಶ್ರೀಗಳವರಿಗೆ ಕಾಣಿಕೆಯನ್ನು ಸಮರ್ಪಿಸುತ್ತಾರೆ. ಆಡಳಿತಾಧಿಕಾರಿಗಳು ಶ್ರೀಮಠಕ್ಕೆ ದತ್ತಿ ಕಾಣಿಕೆಗಳನ್ನು ನೀಡಿದ ಮಹಾಜನರ ಹೆಸರಿನಲ್ಲಿ ಶ್ರೀಶ್ರೀಗಳವರಿಗೆ ಕಾಣಿಕೆಗಳನ್ನು ನೀಡಿದ ಮಹಾರಾಜರ ಹೆಸರಿನಲ್ಲಿ ಶ್ರೀಶ್ರೀಗಳವರಿಗೆ ಕಾಣಿಕೆ ಸಮರ್ಪಿಸಿ, ಸಾಷ್ಟಾಂಗ ಪ್ರಣಾಮ ಸಲ್ಲಿಸುತ್ತಾರೆ. ಇದಾದ ನಂತರ ಶ್ರೀಶ್ರೀಗಳವರು ನೆರೆದ ಶಿಷ್ಯರೆಲ್ಲರಿಗೂ ತೀರ್ಥನೀಡುತ್ತಾರೆ. ಶ್ರೀಮಠೀಯಯಾಗ ಶಾಲೆಯಲ್ಲಿ ಶ್ರೀಲಲಿತಾಹೋಮ, ಶಾರದಮ್ಮನವರ ಸನ್ನಿಧಿಯಲ್ಲಿ ಲಕ್ಷಮಲ್ಲಿಕಾರ್ಚನೆಯ ಉದ್ಯಾಪನೆ ನಡೆಯುತ್ತದೆ. ಮರುದಿನ ಪುನಃ ಶ್ರೀಶ್ರೀಗಳವರಿಂದ ಗುರುಪರಂಪರೆಗೆ ಪೂಜೆ ನಡೆಯುತ್ತದೆ. ನಂತರ ಎಲ್ಲರಿಗೂ ಪ್ರಸಾದ ಮತ್ತು ವ್ಯಾಸಾಕ್ಷತೆಯನ್ನು ಅನುಗ್ರಹಿಸುತ್ತಾರೆ.

ಚಾತುರ್ಮಾಸ್ಯದ ಅವಧಿಯ ಪ್ರತಿಶ್ರಾವಣ ಸೋಮವಾರ ಮಧ್ಯಾಹ್ನ ಜಗದ್ಗುರುಗಳವರು ತಮ್ಮ ಆರಾಧ್ಯದೇವರಾದ ಶ್ರೀಚಂದ್ರಮೌಳೀಶ್ವರ ಸ್ವಾಮಿಗೆ ವಿಶೇಷಪೂಜೆ ನೆರವೇರಿಸುತ್ತಾರೆ. ಶ್ರೀಮಠದ ಪಂಚಾಂಗದಲ್ಲಿ ಸೂಚಿಸಲಾದ ದಿನಗಳಂದು ಶ್ರೀಕೃಷ್ಣ ಜನ್ಮಾಷ್ಟಮಿ, ಸ್ವರ್ಣಗೌರಿ,ವಿನಾಯಕ ಚತುರ್ಥಿ, ಕೇದಾರನವಮಿ ವಾಮನ ಜಯಂತಿ. ಅನಂತ ಪದ್ಮನಾಭವ್ರತ, ಉಮಾಮಹೇಶ್ವರ ವ್ರತ ಮೊದಲಾದವುಗಳನ್ನು ನಡೆಸುವುದಲ್ಲದೆ ಭಾದ್ರಪದ ಚತುರ್ಥಿಯಿಂದ ಪೂರ್ಣಿಮಾಪರ್ಯಂತ ಶ್ರೀ ಜಗದ್ಗುರುಗಳವರ ದಿವ್ಯ ಅಧ್ಯಕ್ಷತೆಯಲ್ಲಿ ಸಮಗ್ರ ಭಾರತದಲ್ಲೇ ಅದ್ವಿತೀಯವೆನ್ನಬಹುದಾದ ಶ್ರೀ ಮಹಾಗಣಪತಿ ವಾಕ್ಯಾರ್ಥ ವಿದ್ವತ್ಸಭೆಯು ನಡೆಯುತ್ತದೆ. ಶ್ರೀ ಮಠದ ಪರಂಪರಾಗತ ಶಿಷ್ಯರು ಸಾಮೂಹಿಕವಾಗಿ ಬಂದು ಚಾತುರ್ಮಾಸ್ಯ ನಿರತರಾದ ಗುರುಗಳವರ ದರ್ಶನ ಪಡೆದು ಪಾದಪೂಜೆ, ಭಿಕ್ಷಾವಂದನೆ ಮೊದಲಾದ ಸೇವೆಗಳನ್ನು ಸಲ್ಲಿಸಿ ಗುರುಗಳವರಿಂದ ಆಶೀರ್ವಾದ ಪಡೆಯುತ್ತಾರೆ. ಇಷ್ಟೊಂದು ಅರ್ಥಪೂರ್ಣವಾದ ಚಾತುರ್ಮಾಸ್ಯವ್ರತವು ಭಾದ್ರಪದ ಹುಣ್ಣಿಮೆಯಂದು ಸಿಮೋಲ್ಲಂಘನದೊಂದಿಗೆ ಮುಕ್ತಾಯಗೊಳ್ಳುತ್ತದೆ.

ಪೂರ್ವಪರಂಪರೆಗೆ ಕಿಂಚಿತ್ತೂ ಚ್ಯುತಿಬಾರದಂತೆ ಶಾಸ್ತ್ರೋಕ್ತವಾಗಿ ಚಾತುರ್ಮಾಸ್ಯವ್ರತವನ್ನು ಆಚರಿಸುವವರು ಪ್ರಾಯಶಃ ಶೃಂಗೇರಿ ಶ್ರೀಶಾರದಾಪೀಠದ ಅವಿಚ್ಛಿನ್ನ ಪರಂಪರೆಯ ಗುರುಗಳು ಮಾತ್ರ. ತಮ್ಮ ಧರ್ಮಯಾತ್ರೆಗಳ ಸಂದರ್ಭದಲ್ಲೂ ಸೂಕ್ತವಾದ ಸ್ಥಳಗಳನ್ನು ಮೊದಲೇ ಆಯ್ಕೆಮಾಡಿ, ಸಕಲ ಸಿದ್ಧತೆಗಳೊಂದಿಗೆ ಶೃಂಗೇರಿಯಲ್ಲಿ ಹೇಗೋ ಹಾಗೆಯೇ ಅಲ್ಲೂ ಈ ವ್ರತವನ್ನು ಸ್ವಲ್ಪವೂ ವ್ಯತ್ಯಯಬಾರದಂತೆ ಆಚರಿಸುತ್ತಿರುವುದು ಶೃಂಗೇರಿ ಧರ್ಮ ಸಂಸ್ಥಾನದ ಜಗದ್ಗುರುಗಳವರ ವೈಶಿಷ್ಟಗಳೆಲ್ಲ ಒಂದು.

## ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ "ಆಟಿತೊ ಆಟ ಕೂಟ"


■...1ನೇ ಪುಟದಿಂದ

ಮಧ್ಯಾಹ್ನಕ್ಕೆ ಬಾಯಿಚಪ್ಪರಿಸುವ, ವಿಶೇಷವಾಗಿ ಆಟಿಯಲ್ಲಿ ತಯಾರಿಸುವ ವ್ಯಂಜನಗಳಾದ ಪತ್ರೊಡೆ, ಹುರುಳಿ ಸಾರು, ಕಣಿಲೆ ಚಟ್ನಿ, ಅಕ್ಕಿ ಹಾಲಬಾಯಿ, ಹಲಸಿನ ಬೀಜ, ಹೆಸರು ಬೇಳೆ ಸಾಂಬಾರು, ಪೇರಡ್ಯ ಪಾಯಸ, ಸಂಜಕ್ ವಡೆ ಒಳಗೊಂಡ ಸುಗ್ರಾಸ ಬೋಜನವನ್ನು ಏರ್ಪಡಿಸಲಾಗಿತ್ತು. ಮಧ್ಯಾಹ್ನದ ನಂತರ ಸಾಂಸ್ಕೃತಿಕ ಕಾರ್ಯಕ್ರಮದ ಅಂಗವಾಗಿ 'ಕರೋಕೆ ರಸಮಂಜರಿ'ಯನ್ನು ಆಯೋಜಿಸಲಾಗಿತ್ತು.

ಹಲವಾರು ಉದಯೋನ್ಮುಖ ಪ್ರತಿಭೆಗಳು ತಮ್ಮ ಸಿರಿಕಂಠದಿಂದ ಯಾವ ಹಿನ್ನೆಲೆಗಾಯಕರಿಗೂ ಕಡಿಮೆ ಇಲ್ಲದಂತೆ ಸುಮಧುರ ಗೀತೆಗಳನ್ನು ಸುಶ್ರಾವ್ಯದಿಂದ ಹಾಡಿ ಮೆಚ್ಚುಗೆ ಗಳಿಸಿದ್ದಾರೆ. ಕಾರ್ಯಕ್ರಮಗಳನ್ನು ಶ್ರೀಯುತ ನಾಗರಾಜ್ ವರ್ಕಾಡಿ ಮತ್ತು ಶ್ರೀ ಪಿ. ಶ್ರೀಕಾಂತ್ ರಾವ್ ನಿರೂಪಿಸಿದರೆ ಶ್ರೀ ಕೆ ಸುರೇಶ್, ಶ್ರೀಮತಿ ಶೈಲಜಾ, ಶ್ರೀಮತಿ ಅರುಣಾ ಶ್ರೀಮತಿ ಕುಸುಮಾ, ಸಹಕರಿಸಿದರು. ಸ್ಪರ್ಧೆಯಲ್ಲಿ ವಿಜೇತರಿಗೆ ಬಹುಮಾನ ವಿತರಣೆಯ ನಂತರ ರಾಷ್ಟ್ರಗೀತೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು.

*ವರದಿ : ಶ್ರೀಮತಿ ಅರುಣಾ ಸೋಮಶೇಖರ್, ಮಂಗಳೂರು*

# ಕನ್ನಡ ಕವಿಕಾವ್ಯ ಪರಿಚಯ-೭ : ಆದಿಕವಿ ಪಂಪ



- ಹರಿದಾಸ ಮ.ನಾ.ಹೆಬ್ಬಾರ ಎಂ.ಎ., ಬಿ.ಎಡ್.

## ಪಂಪ ಕವಿಯ ರಚನಾ ಸಾಮರ್ಥ್ಯ

ಈತನು ತನಗೆ ರಾಜಾಶ್ರಯವನ್ನು ಕೊಟ್ಟ ಚಾಳುಕ್ಯ ದೊರೆ ಅರಿಕೇಸರಿಗೂ ಮಹಾಭಾರತದ ಅರ್ಜುನನಿಗೂ ಅಭೇದವನ್ನು ಕಲ್ಪಿಸಿ ಅರಿಕೇಸರಿಗೆ ಇದ್ದ ಬಿರುದುಗಳನ್ನೆಲ್ಲಾ ಅರ್ಜುನನಿಗೆ ಆರೋಪಿಸಿ ಕಾವ್ಯವನ್ನು ರಚಿಸಿದ್ದಾನೆ. ಆದುದರಿಂದ ಅರಿಕೇಸರಿಗೆ ಇದ್ದ ಹಲವು ಬಿರುದುಗಳು ಐತಿಹಾಸಿಕವಾಗಿ ಅರಿಕೇಸರಿಗೆ ಮಾತ್ರ ಅನ್ವಯಿಸಿದರೂ 'ವಿಕ್ರಮಾರ್ಜುನ ವಿಜಯ' (ಪಂಪ ಭಾರತ)ದಲ್ಲಿ ಇವೆಲ್ಲವೂ ಅರ್ಜುನನಿಗೇ ಅನ್ವಯವಾಗಿವೆ. ಅವುಗಳನ್ನು ಹೀಗೆ ಪಟ್ಟಿ ಮಾಡಿ ಕೊಡಬಹುದು- ಅಕಳಂಕ ರಾಮ; ಅರಿಗ; ಅರಾತಿಕಾಳಾನಳ; ಅರಿಕೇಸರಿ; ಆರೂಢ ಸರ್ವಜ್ಞ, ಉದಾತ್ತ ನಾರಾಯಣ; ಉದಾರ ಮಹೇಶ್ವರ; ಕದನ ತ್ರಿಣೇತ್ರ; ಗಜ ಗಮನ ರಾಜಪುತ್ರ; ಜಗದೇಕ ಮಲ್ಲ; ತಪನಪ್ರಭ; ನೋಡುತ್ತೆಗೆಲ್ವ; ನೃಪ ಪರಮಾತ್ಮ, ಪಡೆಮೆಚ್ಚೆ ಗಂಡ; ಪರಸೈನ್ಯ ಭೈರವ; ಪರಾಕ್ರಮ ಧವಳ; ಪ್ರಚಂಡ ಮಾರ್ತಾಂಡ, ಪ್ರತ್ಯಕ್ಷ ಜೀಮೂತ ವಾಹನ; ಪ್ರತಿಜ್ಞಾ ಗಾಂಗೇಯ; ಮನುಜ ಮಾಂಧಾತ; ಮಹಿಮಾರ್ಣವ; ರಿಪು ಕುರಂಗ ಕಂಠೀರವ; ಲೋಕೈಕ ಕಲ್ಪದ್ರುಮ; ವಿಕ್ರಾಂತ ತುಂಗ; ವಿದ್ವಿಷ್ಟವಿದ್ರಾವಣ; ವಿನಯ ಭೂಷಣ; ವಿಬುಧವನ ಜವನಕಳಹಂಸ; ವೈರಿಗಜಘಟಾ ವಿಘಟನ; ಶರಣಾಗತ ಜಳನಿಧಿ; ಸಮರೈಕ ಮೇರು ಸಹಜಮನೋಜ; ಸಾಮಂತ ಚೂಡಾಮಣಿ; ಸಾಹಸಾರ್ಜುನ; ಸುರತ ಮಕರ ಧ್ವಜ; ಹರಿಗ-ಇತ್ಯಾದಿ.

ಗದ್ಯ-ಪದ್ಯ ಮಿಶ್ರವಾಗಿರುವ ಚಂಪು ವಿನಂತಹ ಕಾವ್ಯ ರೂಪದಲ್ಲಿ ಕಸುವನ್ನು ಮೂಡಿಸಲು ಪಂಪನು ಕನ್ನಡದ ಸಹಜ ದೇಸಿಯ ಜೊತೆಗೆ ಸಂಸ್ಕೃತದ ಸಹಾಯವನ್ನೂ ಪಡೆದಿದ್ದಾನೆ. ಈ ಕಾರಣದಿಂದ ಪಂಪನ ಭಾರತದ ಕನ್ನಡವನ್ನು ಮಾರ್ಗಾರೂಢವಾದ ತಿರುಳ್ಗನ್ನಡ ವೆಂದು ಕರೆದಿರುವುದು ಉಚಿತವಾಗಿದೆ. ಪಂಪನ ಸಂಸ್ಕೃತ ಜ್ಞಾನ ಹಾಗೂ ಗ್ರಹಣ ಶಕ್ತಿ ಉನ್ನತ ಮಟ್ಟದವು. ವ್ಯಾಸ, ವಾಲ್ಮೀಕಿ, ಭಾಸ, ಕಾಳಿದಾಸ, ಭಟ್ಟನಾರಾಯಣ, ಭಾರವಿ, ಶ್ರೀಹರ್ಷ, ಬಾಣ ಮೊದಲಾದ ಕವಿಗಳ ರಚನೆಯಿಂದ ಸಂಪುಷ್ಟವಾಗಿದ್ದ ಸಂಸ್ಕೃತ ಸಾಹಿತ್ಯದ ರಸಲೋಕವನ್ನು ಪಂಪ ಚೆನ್ನಾಗಿ ಬಲ್ಲವನಾಗಿ ದ್ದನು. ಕನ್ನಡದಲ್ಲಿ ವಿಶಿಷ್ಟವಾದ ಅಕ್ಕರ, ರಗಳೆ, ಕಂದ ಮೊದಲಾದ ಛಂದೋರೂಪಗಳನ್ನು ಉಜ್ಜೀವಿಸಿ, ಸಂಸ್ಕೃತದ ವ್ಯಕ್ತ ಗದ್ಯಗಳ ಪ್ರಮುಖ ಲಕ್ಷಣಗಳನ್ನು ಕನ್ನಡಕ್ಕೆ ಹೊಂದಿಸಿಕೊಂಡು ದೇಸಿ ಮಾರ್ಗಗಳ ಸಮನ್ವಯದಿಂದ ಸಿದ್ಧಗೊಂಡ 'ಮಾರ್ಗಾರೂಢವಾದ ತಿರುಳ್ಗನ್ನಡವನ್ನು ತನ್ನ ಎರಡು ಚಂಪೂಕಾವ್ಯಗಳಲ್ಲಿ ನೀಡಿದ್ದಾನೆ. ಒಂದು ಉಚಿತವಾದ ಶಬ್ದ, ಧ್ವನಿಸಮನ್ವಿತವಾದ ಒಂದು ವಾಕ್ಯ, ಒಂದು ಉಜ್ವಲ ಪದ್ಯ ಇಷ್ಟರಲ್ಲೇ ಪಂಪ ಒಂದು ಸನ್ನಿವೇಶವನ್ನೊ, ಕಥಾನಕವನ್ನೊ ತುಂಬಿ ಬಿಡುತ್ತಾನೆ

ಪಂಪನ ಸಮುಚಿತ ರೂಪಕ ನಿರ್ಮಾಣ ಶಕ್ತಿ ಅದ್ವಿತೀಯವಾದುದು; ವೈವಿಧ್ಯ ಪೂರ್ಣವಾದುದು; ಚಿತ್ತದಲ್ಲಿ ಅಚ್ಚೊತ್ತಿ ನಿಲ್ಲಬಲ್ಲಂತಹುದು. ಆತನು ನೀಡಿರುವ ನೂರಾರು ರೂಪಕಗಳ ಕಣಜದಲ್ಲಿ ಒಂದು ಕಾಳು ಈ ರೀತಿಯಿದೆ :- ಕರ್ಣನ ತೊಡೆಯ ಮೇಲೆ ತಲೆಯಿಟ್ಟು ಪರಶುರಾಮರು ನಿದ್ರಿಸಿದ್ದಾಗ ಅವನಿಗೆ ನೋವನ್ನುಂಟು ಮಾಡಲು ದೇವೇಂದ್ರನು ವಜ್ರದುಂಬಿಯಾಗಿ ಬಂದು ಕರ್ಣನ ತೊಡೆಗಳನ್ನು ಕೊರೆಯುವ ಸನ್ನಿವೇಶ-

''ವಜ್ರ ಕೀಟಂಗಳ್ ಕರ್ಣನೆರಡುಂ ತೊಡೆಯುಮನುಳಿಯನೂರಿ ಕೊಡಂತಿಯೊಳ್ ಬೆಟ್ಟದಂತತ್ತಮಿತ್ತಮುರ್ಚಿಪೋಗೆ; ಇನ್ನೊಂದು- ''ಸಾರಸಮನಂಗಜಂಗಮಲಕಾಲಲಿತಾಂಗಿಯರಿಂದ ಮಲ್ತೆ ಸಂಸಾರಂ'' ಇಂತಹ ನೂರಾರು ಉದಾಹರಣೆಗಳನ್ನು ಕೊಡಬಹುದು. ಆಡುಮಾತಿನ ಸೊಗಡು-ರಭಸ-ಚಿತ್ರಮಯತೆಗಳನ್ನು ಪ್ರಕಾಶಪಡಿಸುವ ನೂರಾರು ಗಾದೆ ಮಾತುಗಳನ್ನು ಪಂಪ ತನ್ನ ಕಾವ್ಯದಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದಾನೆ:- ಇಲ್ಲಿವೆ ಒಂದೆರಡು ನಿದರ್ಶನ-

''ತೊಡೆವೇವುದೊ ರೂಪೆ ಸಾಲದೆ?''

''ಪೆರ್ಣನನಿರಿದು ಪಗೆಗೊಂಡರ್''

''ಓಲಗಿಸಿ ಬಾಳ್ವುದೆ ಕಷ್ಟಮಿಳಾಧಿನಾಥರಂ''

ಪಂಪನು ತನ್ನ ಕಾವ್ಯದ ಕೊನೆಯಲ್ಲಿ, ಮಹಾಭಾರತದ ಪಾತ್ರಗಳಲ್ಲಿ ಅಗ್ರಗಣ್ಯವಾದುವುಗಳನ್ನು ಸ್ಮರಿಸಿ, ಇವುಗಳಿಂದಾಗಿ (ಇವರಿಂದಾಗಿ) ಭಾರತವು 'ಲೋಕಪೂಜ್ಯ ನೆನ್ನುತ್ತಾನೆ-ನೋಡಿ-

''ಚಲದೊಳ್ ದುರ್ಯೋಧನಂ ನನ್ನಿಯೊ
ಳಿನತನಯಂ ಗಂಡಿನೋಳ್ ಭಿಮಸೇನಂ ।
ಬಲದೊಳ್ ಮದ್ರೇಶನತ್ಯುನ್ನತಿಯೊಳಮರ
ಸಿಂಧೂದ್ಭವಂ ಚಾಪವಿದ್ಯಾ ।
ಬಲದೊಳ್ ಕುಂಭೋದ್ಭವಂ ಸಾಹಸದ
ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್ ನಿ-।
ರ್ಮಲಚಿತ್ತಂ ಧರ್ಮಪುತ್ರಂ, ಮಿಗಿಲಿವರ್ಗ
ಳಿಗೀ ಭಾರತಂ ಲೋಕಪೂಜ್ಯಂ ॥

ಕನ್ನಡಕ್ಕೆ ಜಯಮಕ್ಕೆ

(ಮುಂದುವರಿಯುವುದು...)

# ಚರ್ಚೆಗಿಂತ ಮಾನವತ್ವವಿರಲಿ

- ಮಾರ್ಪಳ್ಳಿ ಆರ್ ಮಂಜುನಾಥ್



ಇತ್ತೀಚಿನ ಟಿ.ವಿ.ಯಲ್ಲಿರುವ ಛಾನಲ್ ಒಂದರಲ್ಲಿ ನಡೆದ ಚರ್ಚೆಯಲ್ಲಿ ಕೇದಾರನಾಥ ತನ್ನನ್ನೇ ಉಳಿಸಿಕೊಳ್ಳದವ, ಭಕ್ತರನ್ನು ಹೇಗೆ ಕಾಪಾಡುತ್ತಾನೆಂಬ ನಾಸ್ತಿಕತೆಯ ವಾದ ಒಂದೆಡೆಯಾದರೆ, ಮತ್ತೊಂದೆಡೆ ಶಿವನ ಕೋಪವೇ ಜಲಪ್ರಳಯವಾಯಿತೆಂಬ ಆಸ್ತಿಕರವಾದ. ಇವೆರೆಡರ ನಡುವೆ ಮನುಷ್ಯನ ದುರಾಸೆಯಿಂದ ಗುಡ್ಡಗಳನ್ನು ಕಡಿದಿದ್ದರಿಂದ ಪಕ್ಕದಲ್ಲಿಯೇ ಹರಿಯುತ್ತಿದ್ದ ಮಂದಾಕಿನಿಗೆ ಅಡೆತಡೆ ಇಲ್ಲದಿದ್ದುದರಿಂದ ಆ ಪ್ರದೇಶವನ್ನೆಲ್ಲ ಕೊಚ್ಚಿಕೊಂಡು ಹೋದಳೆಂದು, ಜಲಾವೃತವಾಯಿತೆಂಬ ವಾದ.

ಹೀಗೆ ಲಕ್ಷಾಂತರ ಜನ ಪ್ರವಾಹದಲ್ಲಿ ಸಿಲುಕಿ, ನಲುಗುವ ದುಸ್ಥಿತಿಯಲ್ಲಿ ಇಂತಹ ವಿಷಯದ ಚರ್ಚೆಯ ಅಗತ್ಯವಿತ್ತೇ? ಎಂಬ ವಿಚಾರ ನಿಮ್ಮ ಮನಸ್ಸಿಗೆ ಬಂದಿರುವ ಸಾಧ್ಯತೆ ಇರಬಹುದು. ಶಿವನ ಕೋಪದವಿರಲಿ, ಪ್ರಕೃತಿಯ ಮುನಿಸಾಗಿರಲಿ. ಮಾನವನ ದುರಾಸೆಯ ಫಲದಿಂದಾಗಲೀ, ಯಾವುದೇ ಕಾರಣವಿರಲಿ ಘಟನೆ ನಡೆಯುತ್ತಿರುವ ಸಂದರ್ಭದಲ್ಲಿ ಮೊದಲು ಮಿಡಿಯಬೇಕಾದದ್ದು ಮನಸ್ಸು, ಸಹಾಯ-ಸಹಕಾರ, ಕೂಡಲೇ ಪರಿಹಾರಕ್ಕೆ ಧಾವಿಸುವುದು- ಇದೇ ಮಾನವೀಯತೆ.

ಕೇದಾರನಾಥ ಒಂದೇ ಅಲ್ಲ, ಯಾವುದೇ ಪವಿತ್ರ ಸ್ಥಳದಲ್ಲಿ ಇಂತಹ ದುರ್ಘಟನೆ ಸಂಭವಿಸಿದಾಗ ದೇವರು ಏನು ಮಾಡಿದ, ಎಲ್ಲಿ ಹೋಗಿದ್ದ ಎಂಬ ಚರ್ಚೆ ಹುಟ್ಟಿಕೊಳ್ಳುತ್ತದೆ. ಅದೇ ಸುನಾಮಿಯ ಭೀಕರ ಭೀಭತ್ಸತೆ, ಚಂಡಮಾರುತ, ಭೂಕಂಪ, ಜ್ವಾಲಾಮುಖಿ ಸಂಭವಿಸಿದಾಗ ಇಂತಹ ವಾದಗಳು ಮೊಳಕೆಯೊಡೆಯುವುದಿಲ್ಲ. ಮಾತು ಹೊರಬರುವುದಿಲ್ಲ.

ಪುಣ್ಯಕ್ಷೇತ್ರಕ್ಕೆ ಹೋಗುವ ಜನರಲ್ಲಿ ಭಕ್ತರಿರುತ್ತಾರೆ. ಯಾತ್ರಿಕರು ಇರುತ್ತಾರೆ, ಪ್ರವಾಸಿಗರೂ ಇರುತ್ತಾರೆ. ನೋಡುವ ಕುತೂಹಲಿಗಳಿರುತ್ತಾರೆ. ವ್ಯಾಪಾರಸ್ಥರಿರುತ್ತಾರೆ. ಇತಂಹ ಜನವರ್ಗವೇ ಪುಣ್ಯಕ್ಷೇತ್ರವೆನಿಸಿದ ಪ್ರವಾಸಿ ತಾಣಗಳಲ್ಲಿ ಮತ್ತು ದುರ್ಗಮವೆನಿಸುವ ಸುಂದರ ಪ್ರಕೃತಿ ಮಡಿಲಿಗೆ ಹೋಗುತ್ತಾರೆ. ಅತಂಹ ಸಂದರ್ಭಗಳಲ್ಲು ಈ ರೀತಿಯ ಪ್ರಕೃತಿ ವಿಕೋಪ ಸಂಭವಿಸಿರುತ್ತದೆ.

ನಿಜ, ಪುಣ್ಯಕ್ಷೇತ್ರಗಳಲ್ಲಾಗಲೀ, ಪ್ರವಾಸಿ ಕ್ಷೇತ್ರಗಳಲ್ಲಾಗಲೀ ಹೋಗಿಬರುವಂತ ಜನರಿಗೆ, ಪ್ರವಾಸಿಗರಿಗೆ, ಯಾತ್ರಿಕರಿಗೆ ಮೂಲಭೂತ ಸೌಲಭ್ಯಗಳನ್ನು ಒದಗಿಸಬೇಕಾದದ್ದು ಕರ್ತವ್ಯ ಹಾಗೂ ಜವಾಬ್ದಾರಿ. ಅದನ್ನು ಸದುಪಯೋಗ ಪಡಿಸಿಕೊಳ್ಳುವುದು ಜನರಿಗೆ ಬಿಟ್ಟ ವಿಚಾರ. ಆದರೆ ಎಲ್ಲಕ್ಕೂ ಮೀರಿದ ಎಲ್ಲರೂ ಒಪ್ಪಲೇಬೇಕಾದದ್ದು- ಪ್ರಕೃತಿಯ ಅಗೋಚರ ಶಕ್ತಿಯನ್ನು ñ ಅದರ ನಿಗೂಢತೆಯನ್ನು!

ಇಂತಹ ಯಾಂತ್ರಿಕ ಯುಗದಲ್ಲಿ ಬದುಕಿನ ಬಗ್ಗೆ ಹೋರಾಟದಲ್ಲಿಯೇ ಸಿಲುಕಿದ ಮಾನವನಿಗೆ ಆಸ್ತಿಕತೆ ವಾದದಲ್ಲಾಗಲೀ, ನಾಸಿಕತೆ ವಾದದಲ್ಲಾಗಲೀ ಚಿಂತಿಸುವ ಮನಸ್ಸಿಗಿಂತ ತಾನು ಹೇಗೆ ದುಡಿಯಬೇಕು, ಬದುಕಬೇಕು, ಅಧಿಕಾರ ಪಡೆಯಬೇಕು ಎಂಬ ಹೊಯ್ದಾಟದಲ್ಲಿಯೇ ಕಾಲ ಕಳೆಯುತ್ತಿರುವಾಗ ದುರಂತವಾದ ಬಗ್ಗೆ ಅಯ್ಯಯ್ಯೋ ಎಂದು ಮನ ಮಿಡಿಯುವುದಕ್ಕಿಂತ, ತನ್ನ ಉಳಿವು ಬದುಕಿನ ಬಗ್ಗೆ ಯೋಚಿಸುತ್ತಾನೆ, ಭಯ ಪಡುತ್ತಾನೆ ಅಷ್ಟೇ.

ಇತಿಹಾಸದ ಪುಟವನ್ನು ಅವಲೋಕಿಸಿದಾಗ ದ್ವಾರಕೆಯಂತ ಕೃಷ್ಣನ ರಾಜ್ಯವೇ ಸಮುದ್ರದಲ್ಲಿ ಮುಳುಗಿಹೋಗಿದೆ ನಾಗರೀಕತೆಯ ತೊಟ್ಟಿಲೆನಿಸಿದ ಹರಪ್ಪ ಮೊಹಂಜದಾರೋ ಭೂಗರ್ಭದಲ್ಲಿ ಹೂತುಹೋಗಿದೆ. ಅದರಲ್ಲಿ ವಾಸವಾಗಿದ್ದ ಜನರು ಸತ್ತಿರಬಹುದು ಅಥವಾ ಎಷ್ಟೋ ಜನ ಬದುಕಿ ಹೊರಬಂದಿರಬಹುದು. ಇಷ್ಟೆಲ್ಲ ಹೇಳುತ್ತಿರುವುದು ದೇವರನ್ನು ನಂಬಿದವರು ಸಹ ಸಾಯಬಹುದು ಅಥವಾ ನಂಬದೇ ಇರುವವರು ಸಹ ಸಾಯಬಹುದು. ಅನಾಹುತ ಆಕಸ್ಮಿಕ ದುರಂತಗಳು ಯಾರನ್ನೂ ಬಿಡುವುದಿಲ್ಲ.

ದುರಂತದಲ್ಲಿ ಬದುಕಿದಾಗ ದೇವರು ಉಳಿಸಿದ ಎಂದು ಆಸ್ತಿಕರು ಹೇಳಿದರೆ, ನಾಸ್ತಿಕರು ಇನ್ನೊಂದು ಕಾರಣವನ್ನು ಕೊಡಬಹುದು. ಆದರೆ ಇಲ್ಲಿ ಬಹಳ ಮುಖ್ಯವಾಗಿ ಯೋಚಿಸಬೇಕಾದದ್ದು ಮಾನವೀಯತೆ, ಪರಸ್ಪರ ಸಹಾಯ, ಅನುಕಂಪ. ಯಾವ ವಾದಗಳನ್ನಲ್ಲ.

ಆಸ್ತಿಕನ ವಾದ- ಆಸ್ತಿಕರ ನಂಬಿಕೆಯಾದರೆ, ನಾಸ್ತಿಕರ ವಾದ, ಅವರ ಸಿದ್ದಾಂತದ ನಂಬಿಕೆ ಮಾತ್ರ. ಯೋಚನೆ ಮಾತ್ರ. ಇವೆರಡರ ವಾದದಲ್ಲಿ ñ ವಾದವಿದೆಯೇ ಹೊರತು ಯಾರು ಸಹ ಪರಿಪೂರ್ಣತೆಯನ್ನು ಸಾಧಿಸಿ ತೋರಿಸಲಾಗಿಲ್ಲ. ಅಂದ ಮೇಲೆ ವಾದಕ್ಕಿಂತ ಬಹಳ ಮುಖ್ಯವಾದದ್ದು ಮಾನವೀಯತೆ.

ಎಲ್ಲಕ್ಕೂ ಮಿಗಿಲಾಗಿ ದುರಂತಗಳು, ಪ್ರಳಯಗಳು, ಅನಾಹುತಗಳು ಸಂಭವಿಸಿದ ಕ್ಷಣದಲ್ಲಿ ಆಸ್ತಿಕ-ನಾಸ್ತಿಕ ಚರ್ಚೆಗಿಂತ ದುರಂತದಲ್ಲಿ ಸಿಲುಕಿದ-ನಲುಗಿದ-ನಶಿಸಿದ ಜೀವಗಳ ಬಗ್ಗೆ ಸಹಾಯಹಸ್ತ ಚಾಚುವ ಮಾನವೀಯತೆ ಇದೆಯಲ್ಲ, ಅದೇ ಆಸ್ತಿಕ-ನಾಸ್ತಿಕವಾದವನ್ನು ಮೀರಿದ ಮಾನವ ವಾದ. ಈ ದಾರಿಯಲ್ಲಿ ಸಾಗಿದರೆ ಆಸ್ತಿಕ-ನಾಸ್ತಿಕ ಎರಡು ಬೇಡವೆನಿಸುತ್ತದೆ. ಪ್ರೀತಿ-ಪ್ರೇಮ-ಸಹಾಯ ಮನುಷ್ಯತ್ವ ದೊಡ್ಡದೆನಿಸುತ್ತದೆ.

## ವಿಳಾಸ ಬದಲಾವಣೆ

T RANGA RAJA
NALINI SHANUBHG
'CHAITHANYA' 535 -8th CROSS,
M S R RAMAYA, NORTH CITI LAY OUT ,
BHOMA SANDRA, MAIN ROAD,
NAGARANA, BANGALORE - 560077

# ಕಾಸರಗೋಡಿನಲ್ಲಿ ಶ್ರೀನಿವಾಸ ಕಲ್ಯಾಣೋತ್ಸವ

ಸ್ಥಾನಿಕ ಸಮಾಜದ ಆಡಳಿತದಲ್ಲಿರುವ ಕಾಸರಗೋಡಿನ ಕೂಡ್ಲು ಶ್ರೀ ವಿಷ್ಣುಮಂಗಲ ದೇವಸ್ಥಾನದಲ್ಲಿ ತಿರುಪತಿಯಿಂದ ಆಗಮಿಸಿದ ಶ್ರೀ ದೇವಿ -ಭೂದೇವಿ ಸಹಿತ ಶ್ರೀನಿವಾಸ ದೇವರ ಕಲ್ಯಾಣೋತ್ಸವವು ಇತ್ತೀಚೆಗೆ ನೆರವೇರಿತು.

ವೈಭವದ ಮೆರವಣಿಗೆಯಲ್ಲಿ ಆಗಮಿಸಿದ ಶ್ರೀದೇವರಿಗೆ ದೇವಸ್ಥಾನದ ವಸಂತಕಟ್ಟೆಯಲ್ಲಿ ಬೆಳಗಿನ ಪೂಜೆಯ ನಂತರ ನಡೆದ ಧಾರ್ಮಿಕ ಸಭೆಯ ಅಧ್ಯಕ್ಷತೆಯನ್ನು ತಿರುಪತಿ ದಾಸ ಸಾಹಿತ್ಯ ಪ್ರಾಜೆಕ್ಟ್‌ನ ಹಿರಿಯ ಅಧಿಕಾರಿ ಅನಂದ ತೀರ್ಥಾಚಾರ್ ಪಗಡಲ್ ವಹಿಸಿದ್ದರು. ಉಡುಪಿ ಪುತ್ತಿಗೆ ಮಠದ ವಾದಿರಾಜ ವಿದ್ಯಾಪೀಠದ ಸಂಸ್ಕೃತ ಪ್ರಾಚಾರ್ಯ ಶ್ರೀ ಗೋಪಾಲಾಚಾರ್ಯರು ಧಾರ್ಮಿಕ ಬಾಷಣ ನೀಡಿದರು. ಈ ಸಂದರ್ಭದಲ್ಲಿ ಹೃಷಿಕೇಶ ಭಕ್ತವೃಂದದ ಅಧ್ಯಕ್ಷೆ ಶ್ರೀಮತಿ ವೀಣಾ ಶ್ಯಾನುಭಾಗ್ ಹಾಗೂ ಪ್ರಸನ್ನ ಶ್ಯಾನುಭಾಗ್‌ರನ್ನು ಸ್ಮರಣಿಕೆ ನೀಡಿ ಗೌರವಿಸಲಾಯಿತು.

ಸಾಯಂಕಾಲ ನಡೆದ ಶ್ರೀನಿವಾಸ ದೇವರ ಕಲ್ಯಾಣೋತ್ಸವದಲ್ಲಿ ಸುಮಾರು ಹದಿನೈದು ಸಾವಿರಕ್ಕಿಂತಲೂ ಹೆಚ್ಚು ಭಕ್ತಾದಿಗಳು ಪಾಲ್ಗೊಂಡು ಕೃತಾರ್ಥರಾದರು. ದೇವಸ್ಥಾನದ ಅರ್ಚಕ ಶ್ರೀ ಪ್ರಸನ್ನ ಶ್ಯಾನುಭಾಗ್ ಹಾಗೂ ಅನುವಂಶಿಕ ಮೊಕ್ತೇಸರ್ ಶ್ರೀ ಕೆ ಜೆ ಶ್ಯಾನುಭಾಗ್‌ರ ನೇತೃತ್ವದಲ್ಲಿ ನಡೆದ ಈ ಕಾರ್ಯಕ್ರಮವು ರಾತ್ರಿ ಭೋಜನದೊಂದಿಗೆ ಮುಕ್ತಾಯವಾಯಿತು.



# ಅಧ್ಯಕ್ಷರಾಗಿ ಸಾವಿತ್ರಿ ಮನೋಹರ್

ಬೆಳ್ಳಿ ಹಬ್ಬದ ಅಂಚಿನಲ್ಲಿರುವ ಕಾರ್ಕಳದ ಶಾರದಾ ಮಹಿಳಾ ಮಂಡಲದ ಅಧ್ಯಕ್ಷರಾಗಿ ಶ್ರೀಮತಿ ಸಾವಿತ್ರಿ ಮನೋಹರ್ ಆಯ್ಕೆಗೊಂಡಿದ್ದಾರೆ. ಇತ್ತೀಚೆಗೆ ನಡೆದ ಮಹಿಳಾ ಮಂಡಲದ ಸಭೆಯಲ್ಲಿ 3ನೇ ಬಾರಿಗೆ ಅಧ್ಯಕ್ಷರಾಗಿ ಅವಿರೋಧವಾಗಿ ಆಯ್ಕೆಯಾದ ಶ್ರೀಮತಿ ಸಾವಿತ್ರಿ ಮನೋಹರ್‌ರಿಗೆ ಶ್ರೀ ಶಾರದಾ ಅಭಿನಂದನೆಗಳು.

## ಅಂಜನಾ ರಾವ್



ಬೆಳ್ಗಂಗಡಿ ಸುಲ್ಕೇರಿಯ 'ಸಾಕೇತ' ಮನೆಯ ಶ್ರೀ ಸುಬ್ರಹ್ಮಣ್ಯರಾವ್ ಮತ್ತು ಶ್ರೀಮತಿ ಶಕುಂತಳಾ ರಾವ್ ಅವರ ಪುತ್ರಿ ಅಂಜನಾರಾವ್ ಕರ್ನಾಟಕ ಸರಕಾರದ ಸರಕಾರಿ ಪ್ರೌಢ ಶಾಲೆಗಳ ಶಿಕ್ಷಕರ ಆಯ್ಕೆಯ ಸಾಮಾನ್ಯ ಪ್ರವೇಶ ಪರೀಕ್ಷೆಯಲ್ಲಿ ರಾಜ್ಯ ಮಟ್ಟದಲ್ಲಿ 6ನೇ ರ್‍ಯಾಂಕ್ ಪಡೆದಿರುತ್ತಾರೆ. ಪ್ರಸ್ತುತ ದಾವಣಗೆರೆಯ ಹೊನ್ನಾಳಿ ತಾಲೂಕಿನ ನ್ಯಾಮತಿಯ ಸರಕಾರಿ ಪ್ರೌಢ ಶಾಲಾ ಸಹ ಶಿಕ್ಷಕಿಯಾಗಿ ಕರ್ತವ್ಯಕ್ಕೆ ನಿಯುಕ್ತಿಗೊಂಡಿದ್ದಾರೆ. ಅಂಜನಾರವರು ಎಂ ಎಸ್ಸಿ, ಬಿಎಡ್ ಪದವೀದರೆಯಾಗಿದ್ದು, ಬಿಎಡ್ ಪರೀಕ್ಷೆಯಲ್ಲಿಯೂ 3ನೇ ರ್‍ಯಾಂಕ್ ಗಳಿಸಿಕೊಂಡಿರುವುದನ್ನು ಸ್ಮರಿಸಬಹುದು. ಅಂಜನಾರವರ ಪ್ರತಿಭೆಗೆ ಶ್ರೀ ಶಾರದಾ ಅಭಿನಂದನೆಗಳು.

## ಶುಭ ಜನನ

ಎಲ್ಲೂರು ವೈ ಭುವನೇಂದ್ರ ರಾವ್ ಹಾಗೂ ಶ್ರೀಮತಿ ಜಯಶ್ರೀಯವರ ಪುತ್ರ ಪ್ರಸ್ತುತ ಬೆಂಗಳೂರಿನಲ್ಲಿರುವ ಶ್ರೀ ವೈ ಅಜಿತ್ ಹಾಗೂ ಶ್ರೀಮತಿ ಅರ್ಚನಾ ದಂಪತಿಗಳಿಗೆ ದಿನಾಂಕ 26-06-2013 ರಂದು ಗಂಡು ಮಗುವಿನ ಜನನ.

### ಪುಸ್ತಕ ಪರಿಚಯ

1. **ಬದರಿ ಮಲ್‌ಹಾರ್**
   (ಪ್ರವಾಸ ಕಥನ ಹಾಗೂ ಇತರ ಲೇಖನಗಳು.)
   ಲೇಖಕರು : **ಶಾನ್ ಕಾಸರಗೋಡು**
   ಪುಟಗಳು : 156
   ರೂ.ಬೆಲೆ : 100/-
   ಪ್ರಕಾಶಕರು:
   ಶಾಲಿನಿ ಪಬ್ಲಿಕೇಶನ್ಸ್,ಬೆಂಗಳೂರು,

2. **ಚಕ್ರತೀರ್ಥ**
   (ವಿಷ್ಣುಮಂಗಲ ಶ್ರೀ ಮಹಾವಿಷ್ಣು ದೇವಸ್ಥಾನ, ಕೂಡ್ಲು.)
   ಲೇಖಕರು : **ಶಾನ್ ಕಾಸರಗೋಡು**
   ಪುಟಗಳು : 20+4
   ಬೆಲೆ : 20/-ರೂ.
   ಪ್ರಕಾಶಕರು:
   ಶ್ರೀ ಗೋಪಾಲಕೃಷ್ಣ ಪ್ರಕಾಶನ, ಕೂಡ್ಲು.

### ಸಿಂಹ ಮಾಸದ ವಿಶೇಷ ದಿನಗಳು

| | |
|---|---|
| 17-08-2013 | ಸಿಂಹ ಸಂಕ್ರಮಣ, ಸರ್ವೇಕಾದಶೀ, ಮಘಾನಕ್ಷತ್ರಾರಂಭ |
| 18-09-2013 | ಪ್ರದೋಷ |
| 20-09-2013 | ಸೌರ ಋಗುಪಾಕರ್ಮ |
| 21-09-2013 | ಪೂರ್ಣಿಮಾ |
| 24-08-2013 | ಸಂಕಷ್ಟ ಚತುರ್ಥಿ (ಚಂದ್ರೋದಯ ರಾತ್ರಿ 9.20) |
| 25-08-2013 | ಪಂಚಮಿ |
| 05-09-2013 | ಅಮವಾಸ್ಯಾ |
| 17-08-2013 | ಮೂಲಾ ನಕ್ಷತ |
| 08-09-2013 | ಗೌರಿ ತೃತೀಯಾ |
| 09-09-2013 | ಗಣೇಶ ಚತುರ್ಥೀ |
| 13-09-2013 | ಉತ್ತರಾ ನಕ್ಷತ್ರಾರಂಭ |
| 15-09-2013 | ಸರ್ವೇಕಾದಶೀ |
| 17-09-2013 | ಕನ್ಯಾ ಸಂಕ್ರಮಣ, ಪ್ರದೋಷ |

## ಮಹಾಮೃತ್ಯುಂಜಯ ರುದ್ರಯಾಗ

ಕಾರ್ಕಳದ ಶಂಕರನಾರಾಯಣ ರಾಯರ ಧರ್ಮಪತ್ನಿ ಶ್ರೀಮತಿ ಮಹಾಲಕ್ಷ್ಮೀಯವರಿಗೆ ದಿನಾಂಕ 21-07-2013ರಂದು ಸಂಜೀವಿನಿ ಮಹಾಮೃತ್ಯುಂಜಯ ರುದ್ರಯಾಗವು ಶ್ರೀ ವಾಸುಕೀ ಅನಂತಪದ್ಮನಾಭ ದೇವಸ್ಥಾನ, ಬಡಗುಪೇಟೆ ಉಡುಪಿಯಲ್ಲಿ ನೆರವೇರಿತು. ಶ್ರೀಮತಿ ಮಹಾಲಕ್ಷ್ಮೀಯವರು 38 ವರ್ಷಗಳ ಕಾಲ ಎಸ್.ವಿ.ಟಿ. ಹಿರಿಯ ಪ್ರಾಥಮಿಕ ಶಾಲೆ, ಕಾರ್ಕಳದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿರುತ್ತಾರೆ.

## ನಿಧನ

### ಪಿ. ಚಂದ್ರಶೇಖರ್ ರಾವ್

ಮೈಸೂರಿನಲ್ಲಿ ವಾಸ್ತವ್ಯದಲ್ಲಿದ್ದ ಪಿ.ಚಂದ್ರಶೇಖರರಾಯರು (73ವರ್ಷ) ದಿನಾಂಕ 27.07.2013ರಂದು ಮೈಸೂರಿನ ಸ್ವಗೃಹದಲ್ಲಿ ಅಲ್ಪಕಾಲದ ಅಸೌಖ್ಯದಿಂದ ನಿಧನರಾದರು. ಕಿರ್ಲೋಸ್ಕರ್ ಕಂಪೆನಿಯಲ್ಲಿ ಎಕ್ಸಿಕ್ಯೂಟಿವ್ ಇಂಜಿನಿಯರ್ ಆಗಿ ನಿವೃತ್ತರಾದ ಮೇಲೆ ಪ್ರತಿಷ್ಠಿತ ಆರ್.ಕೆ. ಇಂಡಸ್ಟ್ರೀಸ್‌ನಲ್ಲಿಯೂ ಸೇವೆಯಲ್ಲಿದ್ದರು. ದಿವಂಗತರು ಉಡುಪಿಯ ಸ್ಥಾನಿಕ ದ್ರಾವಿಡ ಬ್ರಾಹ್ಮಣ ಸಂಘದ ಮಾಜಿ ಅಧ್ಯಕ್ಷರಾದ ಡಾ| ಪಿ.ವಿಠಲರಾಯರ ಹಿರಿಯ ಸಹೋದರ. ಮೃತರು ಮೂವರು ಪುತ್ರಿಯರು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಶಕುಂತಲಾ

ಮಂಗಳೂರು ಪೊಳಲಿ ನಟ್ಟೋಜಿ ಸುಬ್ರಹ್ಮಣ್ಯರಾಯರ ಧರ್ಮಪತ್ನಿ ಶಕುಂತಲಾರವರು ಅಲ್ಪ ಕಾಲದ ಅಸೌಖ್ಯದಿಂದ ಪೊಳಲಿಯ ಸ್ವಗೃಹದಲ್ಲಿ ದಿನಾಂಕ 20-07-13ರಂದು ದೈವಾಧೀನರಾಗಿದ್ದಾರೆ. ದಿವಂಗತರು ಪತಿ, ಇಬ್ಬರು ಗಂಡು ಮಕ್ಕಳು ಸಹಿತ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

★★★ ★★★

### ಸುಮತಿ ಅಮ್ಮ

ದಿ|ಬಂಗಾಡಿ ಕಿಲ್ಲೂರು ಶ್ರೀ ಕೃಷ್ಣರಾಯರ ಧರ್ಮಪತ್ನಿ ಸುಮತಿ ಅಮ್ಮನವರು (70 ವರ್ಷ) ತಾ.16-7-2013ರಂದು ಅಲ್ಪಕಾಲದ ಅಸೌಖ್ಯದಿಂದ ದೈವಾಧೀನರಾದರು. ಮೃತರು ಓರ್ವ ಪುತ್ರ, ಮೂವರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿದ್ದಾರೆ.

★★★ ★★★

### ಕುಸುಮ ಶಾಂತಕುಮಾರ್

ಚೆನ್ನೈಯಲ್ಲಿ ವಾಸ್ತವ್ಯದಲ್ಲಿರುವ ಶ್ರೀ ತಾಳೆಪ್ಪಾಡಿ ಶಾಂತಕುಮಾರ್‌ರ ಧರ್ಮಪತ್ನಿ ಕುಸುಮಾ ಶಾಂತಕುಮಾರ್ ತಾ.2-8-2013ರಂದು ಅಸೌಖ್ಯದಿಂದ ನಿಧನರಾಗಿರುತ್ತಾರೆ. ಮೃತರು ಪತಿ, ಇಬ್ಬರು ಪುತ್ರರು ಹಾಗೂ ಅಪಾರ ಬಂಧುಬಳಗದವರನ್ನು ಅಗಲಿರುತ್ತಾರೆ.

★★★ ★★★

### ಮಣಿಕಳ ಸುಬ್ಬರಾಯರು

ಪುತ್ತೂರು, ಉಪ್ಪಿನಂಗಡಿ ಪರಿಸರದ ಸ್ಥಾನಿಕ ಸಮಾಜದ ಹಿರಿಯ ವೈದಿಕರಾದ ಮಣಿಕಳ ಸುಬ್ಬರಾಯರು (83 ವರ್ಷ) ತಾ.24-07-2013 ರಂದು ಅಸೌಖ್ಯದಿಂದ ನಿಧನರಾದರು. ಮೃತರು ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧುಬಳಗವನ್ನು ಅಗಲಿರುತ್ತಾರೆ.

★★★ ★★★

### ತಾಳೆಪ್ಪಾಡಿ ಮಹಾಲಕ್ಷ್ಮೀ

ದಿ| ತಾಳೆಪ್ಪಾಡಿ ಈಶ್ವರಯ್ಯನವರ ಧರ್ಮಪತ್ನಿ ತಾಳೆಪ್ಪಾಡಿ ಮಹಾಲಕ್ಷ್ಮೀ (94 ವರ್ಷ)ರವರು ಮೈಸೂರಿನ ಸ್ವಗೃಹದಲ್ಲಿ ತಾ.19-07-2013ರಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಜುಲೈ ತಿಂಗಳಲ್ಲಿ ಅಸ್ತಂಗತರಾದ ಸಮಾಜದ ಇಬ್ಬರು ಗಣ್ಯರು

**ಸ್ಥಾನಿಕ ಸಮಾಜದ ಬಹುಮುಖಿ ವ್ಯಕ್ತಿತ್ವದ ಇಬ್ಬರು ಗಣ್ಯರು ಜುಲೈ ತಿಂಗಳಲ್ಲಿ ನಿಧನರಾದರು. ಖ್ಯಾತ ವೈದ್ಯೆಯಾಗಿ, ಮಹಾರಾಷ್ಟ್ರ ಸರಕಾರದ ಸಚಿವರಾಗಿ ಸಾಮಾಜಿಕ ಕಾರ್ಯಗಳಲ್ಲಿ ತೊಡಗಿಸಿಕೊಂಡ ಡಾ| ಲಲಿತಾ ರಾವ್ ಹಾಗೂ ಅಟೋಮೋಬೈಲ್ ಕ್ಷೇತ್ರದಲ್ಲಿ ಕ್ರಾಂತಿಯನ್ನುಂಟುಮಾಡಿದ ಮಂಗಳೂರಿನ ಬಿ ಎಂ ಸಂಜೀವ ರಾವ್ ಅಸ್ತಂಗತರಾದ ನಮ್ಮ ಸಮಾಜದ ಇಬ್ಬರು ಹೆಮ್ಮೆಯ ಗಣ್ಯರು.**



### ಡಾ| ಲಲಿತಾರಾವ್ (93 ವರ್ಷ)

ಮಂಗಳೂರಿನ ಆಯುರ್ವೇದ ಭೂಷಣ ದಿ. ಎಂ ವಿ ಶಾಸ್ತ್ರಿಯವರ ಪುತ್ರಿ, ಉದ್ಯಮಿ ಪಿ ವೆಂಕಟ ರಾವ್ ಅವರ ಧರ್ಮಪತ್ನಿ ಹಾಗೂ ಖ್ಯಾತ ಕ್ರಿಕೆಟಿಗ ಶ್ರೀ ರವಿಶಾಸ್ತ್ರಿಯವರ ಸೋದರತ್ತೆ ಡಾ| ಲಲಿತರಾವ್ ಮಂಗಳೂರಿನಲ್ಲಿ 1920ರಲ್ಲಿ ಜನಿಸಿದ್ದು, ಪ್ರಾಥಮಿಕ ವಿದ್ಯಾಭ್ಯಾಸವನ್ನು ಮಂಗಳೂರಿನಲ್ಲಿಯೇ ಪಡೆದು ಮುಂಬೈಯಲ್ಲಿ ಮೆಟ್ರಿಕ್ ಪರೀಕ್ಷೆ ತೇರ್ಗಡೆಯಾದರು. ಇಂಟರ್‌ಮೀಡಿಯೆಟ್ ಪರೀಕ್ಷೆಯ ನಂತರ ಮುಂಬೈಯ ಟೋಪಿವಾಲಾ ಮೆಡಿಕಲ್ ಕಾಲೇಜಿನಲ್ಲಿ ವೈದ್ಯಕೀಯ ಶಿಕ್ಷಣ ಪಡೆದಿರುವ ಡಾ| ಲಲಿತಾರಾವ್ ಅವರು ಅಂತಿಮ ಪರೀಕೆಯಲ್ಲಿ ಪ್ರತಿಷ್ಠಿತ 'ಜೆನ್ನಿಂಗ್ಸ್' ಬಹುಮಾನ ಪಡೆದು ಕೊಂಡರು.


ವೈದ್ಯರಾಗಿ ಮುಂಬೈಯ ಕೊಳಗೇರಿ ಪ್ರದೇಶಗಳಲ್ಲಿ ಮಹಿಳೆಯರಿಗೆ ಮತ್ತು ಮಕ್ಕಳಿಗಾಗಿ ತರಗತಿಗಳನ್ನು ನಡೆಸಿದ್ದಲ್ಲದೆ ಮಧ್ಯಪಾನ ವಿರೋಧಿ ಚಟುವಟಿಕೆಗಳಿಂದ ಜನಮನ ಗೆದ್ದಿದ್ದರು. ಕ್ವಿಟ್ ಇಂಡಿಯಾ ಚಳುವಳಿಯಲ್ಲಿಯೂ ಭಾಗವಹಿಸಿದ್ದ ಲಲಿತಾರಾವ್ ಭೂಗತ ಚಳುವಳಿಗಾರರಿಗೆ ವೈದ್ಯಕೀಯ ಸೇವೆ ನೀಡುತ್ತಿದ್ದರು.

1980ರಲ್ಲಿ ಮಾತುಂಗಾ ವಿಧಾನ ಸಭಾ ಕೇತ್ರದಲ್ಲಿ ಸ್ಪರ್ಧಿಸಿ, ಪ್ರಚಂಡ ಬಹುಮತದೊಂದಿಗೆ ಆರಿಸಿ ಬಂದು ಮಹಾರಾಷ್ಟ್ರ ಸರಕಾರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಸಚಿವೆಯಾಗಿ ಅಂದಿನ ಆಸ್ಪತ್ರೆಗಳ ಸುಧಾರಣೆಗೆ ಶ್ರಮ ವಹಿಸಿದ್ದರು. ಕುಷ್ಟರೋಗ ನಿವಾರಣೆಗಾಗಿ ಡಾ| ಲಲಿತಾರಾವ್ ಮಾಡಿರುವ ಶ್ರಮ ಇಂದಿಗೂ ಮನೆಮಾತಾಗಿದೆ.

ಅಪ್ರತಿಮ ಕೊಳಲು ವಾದಕಿಯಾಗಿ, ಬಿ ಎಸ್ ಕೆ ಬಿ ಅಸೋಸಿಯೇಶನ್ ಮತ್ತು ಕನ್ನಡ ಕಲಾ ಕೇಂದ್ರದ ಅಧ್ಯಕ್ಷರಾಗಿ ಸಂಸ್ಥೆಗಳನ್ನು ಮುನ್ನಡೆಸಿದ್ದರು. ಇವರ ಈ ಎಲ್ಲಾ ಬಹುಮುಖಿ ಕಾರ್ಯಗಳನ್ನು ಗುರುತಿಸಿ 1983ರಲ್ಲಿ ಪ್ರತಿಷ್ಠಿತ ಡಾ| ಬಿ ಸಿ ರಾಯ್ ರಾಷ್ಟ್ರೀಯ ಪ್ರಶಸ್ಥಿ ನೀಡಿ ಗೌರವಿಸಲಾಗಿದೆ.

ದಿನಾಂಕ 28-07-13ರಂದು ನಿಧನರಾದ ಡಾ| ಲಲಿತಾರಾವ್ ಓರ್ವ ಪುತ್ರ (ಅಮೇರಿಕಾದಲ್ಲಿದ್ದಾರೆ) ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

### ಬಿ. ಎಂ. ಸಂಜೀವ ರಾವ್ (91ವರ್ಷ)



ಸ್ವಾತಂತ್ರ್ಯ ಹೋರಾಟಗಾರ, ಭಾರತೀಯ ಸೇನಾ ಯೋಧ, ಸಾಮಾಜಿಕ ದುರೀಣ ಮಂಗಳೂರು ಹಾಗೂ ಅವಿಭಜಿತ ದ ಕ ಜಿಲ್ಲೆಯ ಕರಾವಳಿಯಲ್ಲಿ ಅಟೋಮೋಬೈಲ್ ಕ್ಷೇತ್ರದ ಕ್ರಾಂತಿಕಾರ, ಹಲವು ಪ್ರಥಮಗಳ ನೇತಾರ ಬಿ ಎಂ ಸಂಜೀವರಾಯರು ಮಂಗಳೂರಿನ ಕೆ ಪಿ ಟಿ ಯಲ್ಲಿ ಅಟೊಮೋಬೈಲ್ ಎಂಜಿನಿಯರಿಂಗ್‌ನಲ್ಲಿ ಎಂಜಿನಿಯರಿಂಗ್ ಪದವಿ ಪಡೆದು ತಮ್ಮ 30ರ ಹರೆಯದಲ್ಲಿ ಸ್ಟಾಂಡರ್ಡ್ ಅಟೋಮೋಬೈಲ್ ಸಂಸ್ಥೆಯನ್ನು ಸ್ಥಾಪಿಸಿದರು. ಈ ಕ್ಷೇತ್ರದಲ್ಲಿ ಸಾಧನೆ ಮಾಡುತ್ತಾ ಸ್ಟಾಂಡರ್ಡ್ ಅಟೋ ಇಂಡಸ್ಟ್ರೀಸ್, ವಿಕ್ರಮ್ ಮೋಟರ್ಸ್ , ಪ್ರಭಾತ್ ಅಟೋಮೊಬೈಲ್ಸ್ , ಸುವರ್ಣ ಮೋಟರ್ಸ್ ಮೊದಲಾದ ಹೆಸರಾಂತ ಸಂಸ್ಥೆ ಸ್ಥಾಪಿಸಿದ ಕೀರ್ತಿ ಬಿ ಎಂ ಸಂಜೀವರಾಯರಿಗೆ ಸಲ್ಲುತ್ತದೆ. 50ರ ದಶಕದಲ್ಲಿ ಮಂಗಳೂರಿಗೆ ಲ್ಯಾಂಬ್ರೆಟಾ ವಾಹನಗಳ ಪರಿಚಯ ಮಾಡಿದ ಸಂಜೀವರಾಯರು ಲ್ಯಾಂಬ್ರೆಟಾ, ರಾಜ್‌ದೂತ್ ಬೈಕ್, ತ್ರಿಚಕ್ರ ವಾಹನ, ಯಮಾಹಾ ಸರಣಿ, ಹ್ಯೊಂಡೈ ಸರಣಿ ಮುಂತಾದ ವಾಹನಗಳ ಪ್ರಧಾನ ಢೀಲರ್ ಆಗಿದ್ದರು.

ತಮ್ಮದೇ ಅಟೋಮೊಬೈಲ್ ವರ್ಕ್ ಶಾಪ್‌ಗಳಲ್ಲಿ ಅಲ್ಲದೆ ದ್ವಿಚಕ್ರ ವಾಹನಗಳ ಕ್ಷೇತ್ರದಲ್ಲಿ ಸಾವಿರಾರು ಜನರಿಗೆ ಉದ್ಯೋಗ ಸೃಷ್ಠಿಸಿದ ಕೀರ್ತಿ ಸಂಜೀವರಾಯರದು. 70ರ ದಶಕದಲ್ಲಿ ಭಾರತ ಸರಕಾರದ 20 ಅಂಶ ಕಾರ್ಯಕ್ರಮಗಳ ಅಡಿಯಲ್ಲಿ ಯುವಕರಿಗೆ ತರಬೇತಿ ನೀಡಲು ರಾಜ್ಯ ಸರಕಾರದಿಂದ ನೇಮಕಗೊಂಡ ಏಕೈಕ ಸಂಸ್ಥೆ ಸ್ಟಾಂಡರ್ಡ್ ಅಟೊಮೊಬೈಲ್ಸ್ ಮಾತ್ರ.

ಮಂಗಳೂರು ರೋಟರಿಕ್ಲಬ್ ಅಧ್ಯಕ್ಷನಾಗಿ, ಕೆನರಾ ಚೇಂಬರ್ಸ್ ಪ್ರೊಡೆಕ್ಟಿವಿಟಿ ಕೌನ್ಸಿಲ್, ಎಂ.ಎಂ.ಎ, ಇಂಜಿನಿಯರ್ಸ್ ಸಂಘ, ಸುಬ್ರಮಣ್ಯ ಸಭಾ, ಅದ್ವೈತ ಸಮಿತಿ, ಶಿವ ಬ್ರಾಹ್ಮಣ ಸೇವಾ ಸಂಘ ಮುಂತಾದ ಸಂಘಟನೆಗಳಲ್ಲಿ ವಿವಿಧ ಪದಾಧಿಕಾರಗಳನ್ನು ನಿರ್ವಹಿಸಿ ಯಶಸ್ವಿಯಾಗಿದ್ದರು.

ದ.ಕ. ಅಟೊಮೊಬೈಲ್ ಆಂಡ್ ಟಯರ್ ಡೀಲರ್ಸ್ ಸಂಸ್ಥೆಯಿಂದ ಜೀವನ ಸಾಧನೆ ಪ್ರಶಸ್ತಿ, ಪಾವಂಜೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನ ಸಹಿತ ಹಲವಾರು ಸಂಘ ಸಂಸ್ಥೆಗಳಿಂದ ಅನೇಕ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ದಿನಾಂಕ 31.07.2013ರಂದು ನಿಧನರಾದ ನಮ್ಮ ಶ್ರೀಶಾರದಾ ಪತ್ರಿಕೆಯ ಮಹಾಪೋಷಕರೂ ಆಗಿರುವ ಅಟೋಮೊಬೈಲ್ ಸಂಜೀವ್‌ರಾಯರು ಇಬ್ಬರು ಪುತ್ರರು ಹಾಗು ಇಬ್ಬರು ಪುತ್ರಿಯರನ್ನು ಹಾಗೂ ಅಪಾರ ಬಂಧು ಬಾಂಧವರನ್ನು ಅಗಲಿದ್ದಾರೆ.

## ವಿದೇಶ ಪ್ರಯಾಣ



**ಚೆಂಡುಕಳ ಕಾರ್ತಿಕ್ ರಾವ್**

ಚೆಂಡುಕಳ ಕಾರ್ತಿಕ್ ರಾವ್‌ರವರು ಉನ್ನತ ಶಿಕ್ಷಣ (M.S. in VLSI Design) ಶಿಕ್ಷಣಕ್ಕಾಗಿ ಆಗಸ್ಟ್ 8ರಂದು ಅಮೆರಿಕಾದ ಕ್ಯಾಲಿಫೋರ್ನಿಯಾಕ್ಕೆ ತೆರಳಿದ್ದಾರೆ. ಇವರು Freeseak Semi Conductor ನೋಯ್ಡಾನಲ್ಲಿ ಸೀನಿಯರ್ ಡಿಸೈನರ್ ಇಂಜಿನಿಯರ್ ಆಗಿ 3 ವರ್ಷ ಸೇವೆ ಸಲ್ಲಿಸಿರುತ್ತಾರೆ.

ಇವರ ಸಾಧನೆಗೆ ಶುಭಕೋರುವ,

**ಚೆಂಡುಕಳ ಗಣೇಶ್ ರಾವ್ ಮತ್ತು ಉಷಾ ರಾವ್** (ತಂದೆ-ತಾಯಿ)

ಶ್ರೀ ಶಾರದಾ

**REVISED ADVERTISEMENT RATES**

(Effective from August 2013)

| | |
|---|---|
| FRONT PAGE | **Rs.25/- per Column Cms** |
| BACK PAGE | **Rs.20/- per Column Cms** |
| INSIDE PAGE | **Rs.15/- per Column Cms** |
| FRONT PAGE EAR PANNEL (9 cms x 4 cms) | **Rs.300 / month** **Rs.3000 / Year** |
| FRONT PAGE BOTTOM SPREAD (6 cms x 4 Columns) | **Rs.600 / month** **Rs.6000 / Year** |
| BACK PAGE BOTTOM SPREAD (5 cms x 4 Columns) | **Rs.500 / month** **Rs.5000 / Year** |

Note : Front Page Minimum Size 10 cms x 2 Columns
Back Page Minimum Size 5 cms x 2 Columns
Inside Page Minimum Size 5 cms x 1 Column

*(Width of 1 Column is 5.5 cms, Width of 2 Column is 11.5 cms, Width of 3 Column is 17.5 cms, Width of 4 Column is 23 cms)*


# ಚಾತುರ್ಮಾಸದಲ್ಲಿ ಗುರುಗಳ ಭೇಟಿ

**ಉಡುಪಿ ಕುಂಜಿಬೆಟ್ಟಿನಿಂದ-**

ನಮ್ಮ ಕುಲಗುರುಗಳೂ ದಕ್ಷಿಣಾಮ್ನಾಯ ಶ್ರೀಕ್ಷೇತ್ರ ಶೃಂಗೇರಿಯ ಜಗದ್ಗುರುಗಳೂ ಆದ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳು ಈ ಬಾರಿ ತಮ್ಮ ಚಾತುರ್ಮಾಸ ವ್ರತವನ್ನು ಶೃಂಗೇರಿಯಲ್ಲೇ ಕೈಗೊಂಡಿದ್ದು, ಪ್ರತಿವರ್ಷದಂತೆ ಅವರ ಭೇಟಿಗಾಗಿ ತಾ.25-08-2013ರಂದು ಶೃಂಗೇರಿಗೆ ತೆರಳುವುದೆಂದು ನಮ್ಮ ಸಮಾಜ ಬಾಂಧವರು ಜೊತೆಯಾಗಿ ತೀರ್ಮಾನಿಸಿದ್ದಾರೆ. ಅದರಂತೆ ಶ್ರೀಶಾರದಾ ಮಂಟಪ ಕುಂಜಿಬೆಟ್ಟು ಇಲ್ಲಿಂದ ಸಮಾಜ ಬಾಂಧವರು ಅದೇ ದಿನ ಬೆಳಿಗ್ಗೆ 7-00 ಗಂಟೆಗೆ ಹೊರಡುವುದೆಂದು ನಿರ್ಣಯಿಸಲಾಗಿದೆ. ಆಸಕ್ತ ಸಮಾಜಬಾಂಧವರು ಮೆನೇಜರ್, ಶಾರದಾ ಮಂಟಪ (9448108920), ಅಥವಾ ಕೃಷ್ಣಮೂರ್ತಿರಾವ್ (9663049590) ಇವರನ್ನು ಸಂಪರ್ಕಿಸಲು ಕೋರಲಾಗಿದೆ.

**ಪಡುಬಿದ್ರಿಯಿಂದ-**

ಪಡುಬಿದ್ರಿ ಸ್ಥಾನಿಕ ಬ್ರಾಹ್ಮಣ ಸಭಾ (ರಿ.) ವತಿಯಿಂದ ಸಂಘದ ಕಾರ್ಯಾಲಯ ನಂದಗೋಕುಲ, ಪಡುಬಿದ್ರಿ ಇಲ್ಲಿಂದ ಅದೇ ದಿನ ಬೆಳಿಗ್ಗೆ 7-00 ಗಂಟೆಗೆ ಹೊರಡುವುದೆಂದು ನಿರ್ಣಯಿಸಲಾಗಿದೆ. (ಪ್ರತಿಯೊಬ್ಬರಿಗೆ ಪ್ರಯಾಣ ದರ ತಲಾ ರೂ.250/-) ಆಸಕ್ತ ಸಮಾಜಬಾಂಧವರು ಶ್ರೀ ದಿವಾಕರ್ ರಾವ್ ಎಮ್.ಕೆ. (9902169110) ಇವರನ್ನು ಸಂಪರ್ಕಿಸಲು ಕೋರಲಾಗಿದೆ.



ಎಮ್. ದೇವಾನಂದ್ ಭಟ್
Cell : 9845644556
9483913344
ಶೋಭಾ ಡಿಜಿಟಲ್
ಸ್ಟುಡಿಯೋ & ವೀಡಿಯೊ
ಬೆಳ್ವಾಯಿ-574213 (08258)-276177 (O)
ಮೂಡಬಿದ್ರಿ ಲಾವಂತ ಕಾಂಪ್ಲೆಕ್ಸ್ 9901995655
ಎಡಪದವು - 574 164 (0824)-2256374 (O) ಮಂಗಳೂರು, ದ.ಕ.
ಸಮಾಜ ಬಾಂಧವರಿಗೆ ರಿಯಾಯಿತಿಯನ್ನಿತ್ತು ಪ್ರೋತ್ಸಾಹಿಸಲಾಗುವುದು

Celebrations
Conference & Party Hall (Air Conditioned)
HALL AVAILABLE FOR BIRTHDAYS, CONFERENCES, CORPORATE MEETINGS, CLUB MEETINGS & OTHER FUNCTIONS.

FOR BOOKINGS CONTACT
ANUGRAHA BUILDING, UDUPI - MANIPAL ROAD, LAXMINDRA NAGAR, KUNJIBETTU POST, UDUPI - 576 102. Mob.: 9632099439
Prop. : ADARSH RAO


RAJESH POWER PRESS
PRINTERS & PUBLISHERS
DARBE, PUTTUR, DA. KA. - 574 202.
KARNATAKA STATE, SOUTH INDIA.
Ph : (08251) 231696, 231697 & 322386
E-mail : msraghunathrao@hotmail.com
QUALITY FIRST AND ALWAYS

Krishna Rao
Ph : 2520652
Mob. : 9902029048
KISHAN
Studio & Video
Indoor Photography & Port Folio Photography, Video & Mixing, Lamination
MAIN ROAD, MAJOOR & BANTAKAL.

Buying and selling shares as easy as checking your emails
Sharekhan Online Trading Account Features:
- Your bank account gets directly linked to trading account
- Can do direct fund transfer from any of 11 leading banks
- Choose your trading account, Classic, FastTrade, TradeTiger
- Apply online for Stocks, Mutual Funds and IPO's

Contact : Pradeep Rao K.
Tel : 0824 2412903, 9448191028
Navadurga Share Services
Email : navdurga@bp.sharekhan.com
Sharekhan YOUR GUIDE TO THE FINANCIAL JUNGLE
Visit : www.sharekhan.com
Sharekhan Ltd.: BSE Cash-INB011073351; F&O-INF011073351; CD-INE011073351; NSE - INB/ INF231073330; CD - INE231073330; MCX Stock Exchange : CD - INE261073330 DP: NSDL-IN-DP-NSDL-233-2003; CDSL -IN-DP-CDSL- 271-2004; PMS INP000000662; Mutual Fund: ARN 20669. Sharekhan Commodities Pvt.Ltd.: MCX- 10080(MCX/TCL/CORP/0425); NCDEX -00132; (NCDEX/TCM/CORP/0142); for any complaints email at igc@sharekhan.com. Regd Add:- A-206, Phoenix House, Phoenix Mills Compound, Senapati Bapat Marg, Lower Parel, Mumbai- 400013.Investing in equities & commodities future involves risk. Please carefully read the risk disclosure document as prescribed by SEBI & relevant exchanges and Do 's & Don'ts by NCDEX. (Subbroker Regn.Nos: BSE: INS010606122;NSE: INS23106924)

ದೇವಿಕೃಪಾ ಏಜೆನ್ಸೀಸ್, ನಂದಿಕೂರು
ಫೋನ್ : 2556536 (R), 2555466 (O), Mobile : 9845149521
ಶಾಂತಲಾ 100 ಅಗರ್ ಬತ್ತಿಯ ಮುಖ್ಯ ವಿತರಣೆಗಾರರು ಹಾಗೂ ಕರ್ಪೂರ, ಲೋಬಾನ ಮುಂತಾದವುಗಳ ರಖಂ ವ್ಯಾಪಾರಸ್ಥರು.
ಪ್ರೊ। ಎಸ್. ಜನಾರ್ದನ್ ರಾವ್
ದೇವಿಕೃಪಾ, ನಂದಿಕೂರು, ಉಡುಪಿ ತಾಲೂಕು

ತಂತ್ರಾಡಿ ವಿಶ್ವನಾಥ ಶಾನುಭೋಗ್
94487 24161
97417 85551
ಶುಭ ಸಮಾರಂಭಗಳ ಛಾಯಾಚಿತ್ರಣ ಹಾಗೂ ವೀಡಿಯೊ ಚಿತ್ರಣಕ್ಕಾಗಿ ಸಂಪರ್ಕಿಸಿ
Harikrishna Digitals
"ಶ್ರೀರಂಗ", ವಿ. ಪಿ. ನಗರ, 3ನೇ ಮುಖ್ಯ ರಸ್ತೆ, ಕುಂಜಿಬೆಟ್ಟು, ಉಡುಪಿ - 576 102

ಪ್ರೊ : ಸುಧಾಕರ್ ರಾವ್ ಬೆಳ್ಳೆ
ಶ್ರೀಮಾತಾ ಇಲೆಕ್ಟ್ರಾನಿಕ್ಸ್
ಎಲ್ಲಾ ರೀತಿಯ ಗೃಹೋಪಯೋಗಿ ವಸ್ತುಗಳಿಗಾಗಿ ಭೇಟಿ ನೀಡಿ....
ಪ್ರೀತಿ ಕಾಂಪ್ಲೆಕ್ಸ್, ಬೆಳ್ಮಣ್ಣು, ಉಡುಪಿ. ಫೋನ್ : 08258-274103
ಚೈತ್ರ ಕಾಂಪ್ಲೆಕ್ಸ್, ಪಡುಬಿದ್ರಿ ಗ್ರಾಮಪಂಚಾಯತ್‌ನ ಎದುರು. ಫೋನ್ : 0820-2599093


Owned & Published by : U. Aravindakumar - Secretary Sthanika Dravida Brahmana Sangha (R.), Shri Sharada Mantapa, Sharada Nagara, Kunjibettu, Udupi - 576 102. Ph : 0820-2520754
Edited by Krishnakumar Rao Mattu, Designed @ SriNidhi Computer Graphics, Rajataadri, Manipal, Printed at Agrahara Offsets, Udupi. E-mail : srisharadaudupi@yahoo.co.in Website : www.srisharada.org